# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದಲ್ಲಿ ಹೊಸ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮವಾದ "ಸಾವಯವ ಸಿರಿ" ಯೋಜನೆ ಅನುಷ್ಠಾನಗೊಳಿಸಲು ಮಂಜೂರಾತಿ ನೀಡುವ ಬಗ್ಗೆ.

**ಓದಲಾಗಿದೆ:**

1. 2021-22 ನೇ ಸಾಲಿನ ರಾಜ್ಯ ಆಯವ್ಯಯ ಭಾಷಣ ಕಂಡಿಕೆ-46
2. 2021-22 ನೇ ಸಾಲಿನ ರಾಜ್ಯ ಆಯವ್ಯಯ ಭಾಷಣ ಕಂಡಿಕೆ-51
3. ಕೃಷಿ ಆಯುಕ್ತರ ಪತ್ರ ಸಂಖ್ಯೆ: ಉಕೃನಿ/ಸಾಕೃಘ/ಸಾಸಿಯೋ/ ಪ್ರಸ್ತಾವನೆ/ 2021-22 ದಿನಾಂಕ:14.07.2021.
4. ಸರ್ಕಾರದ ಪತ್ರ ಸಂಖ್ಯೆ: AGRI-ACT/95/2021 ದಿನಾಂಕ:23.09.2021.
5. ಕೃಷಿ ಆಯುಕ್ತರ ಪತ್ರ ಸಂಖ್ಯೆ: ಉಕೃನಿ/ಸಾಕೃಘ/ಸಾಸಿಯೋ/ ಪ್ರಸ್ತಾವನೆ/ 2021-22 ದಿನಾಂಕ:05.10.2021.
6. ಕೃಷಿ ಆಯುಕ್ತರ ಪತ್ರ ಸಂಖ್ಯೆ: ಉಕೃನಿ/ಸಾಕೃಘ/ಸಾಸಿಯೋ/ ಪ್ರಸ್ತಾವನೆ/2021-22, ದಿನಾಂಕ: 25-10/10-11/2021 ಹಾಗೂ ದಿ:05/02/2022.

***

**ಪ್ರಸ್ತಾವನೆ,**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-46ರಲ್ಲಿ ಮಾನ್ಯ ಮುಖ್ಯಮಂತ್ರಿಯವರು "ಜನರಿಗೆ ಆರೋಗ್ಯಕರ ಹಾಗೂ ರಾಸಾಯನಿಕ ಮುಕ್ತ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳನ್ನು ದೊರಕಿಸಲು ಹಾಗೂ ಸಾವಯವ ಕೃಷಿಯನ್ನು ಉತ್ತೇಜಿಸಲು ರೂ.500.00 ಕೋಟಿಗಳ ಯೋಜನೆಯನ್ನು ರೂಪಿಸಲಾಗುವುದು" ಎಂದು ಘೋಷಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-51ರಲ್ಲಿ ಮಾನ್ಯ ಮುಖ್ಯಮಂತ್ರಿಗಳು "ಸಾವಯವ ಮತ್ತು ಸಿರಿಧಾನ್ಯಗಳನ್ನು ವೈಜ್ಞಾನಿಕವಾಗಿ ಮಾರಾಟ ಮಾಡಲು ಹಾಗೂ ರೈತರಿಗೆ ಗರಿಷ್ಠ ಬೆಲೆ ದೊರಕಿಸಲು ರಾಷ್ಟ್ರೀಯ ಇ-ಮಾರುಕಟ್ಟೆ ಲಿಮಿಟೆಡ್ ಮೂಲಕ ಅವಕಾಶ ಕಲ್ಪಿಸಲಾಗುವುದು" ಎಂದು ಘೋಷಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ರಾಜ್ಯದಲ್ಲಿ ಸಾವಯವ ಕೃಷಿ ಉತ್ತೇಜನಕ್ಕೆ ರಚಿಸಲಾಗಿರುವ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯು ಶ್ರೀ ಆನಂದ ಆ. ಶ್ರೀ ಉಪ್ಪಳ್ಳಿ ರವರ ಅಧ್ಯಕ್ಷತೆಯಲ್ಲಿ ಹಲವು ಭಾರಿ ಸಭೆಯನ್ನು ಜರುಗಿಸಿ, ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಕ್ಕೆ ಆಯವ್ಯಯ ಘೋಷಣೆಯನ್ವಯ ವಿವರವಾಗಿ ಚರ್ಚಿಸಿ, ವಿವರವಾದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ಕ್ರಿಯಾ ಯೋಜನೆಯನ್ನು 2021-22ನೇ ಸಾಲಿನಲ್ಲಿ "ಸಾವಯುವ ಸಿರಿ" ಯೋಜನೆಯಾಗಿ ರಾಜ್ಯಾದ್ಯಂತ ಅನುಷ್ಠಾನಗೊಳಿಸಲು ರಾಜ್ಯ ವಲಯ ಸಾವಯವ ಕೃಷಿ ಯೋಜನೆಯ ಲೆಕ್ಕ ಶೀರ್ಷಿಕೆ: 2401-00-104-0-12 ರಡಿ ರೂ.500.00 ಕೋಟಿ ಅನುದಾನವನ್ನು ಯೋಜನೆಯ ಅನುಷ್ಠಾನಕ್ಕಾಗಿ ಒದಗಿಸಲು ಕೋರಿ ನಿಗದಿತ ನಮೂನೆಗಳಲ್ಲಿ ಕೃಷಿ ಆಯುಕ್ತರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಪತ್ರದಲ್ಲಿ, ಆರ್ಥಿಕ ಇಲಾಖೆಯ ಸೂಚನೆಯಂತೆ ಆಯವ್ಯಯ ಘೋಷಣೆ ಕಂಡಿಕೆ - 46ನ್ನು ಅನುಷ್ಠಾನಗೊಳಿಸಲು, ಕ್ರಿಯಾಯೋಜನೆಯನ್ನು ಆಯವ್ಯಯದಲ್ಲಿ ಲಭ್ಯವಿರುವ ಅನುದಾನವಾದ ರೂ.50.00 ಕೋಟಿ ಮಿತಿಯೊಳಗೆ ಸಿದ್ಧಪಡಿಸಲು ಕೃಷಿ ಆಯುಕ್ತರನ್ನು ಕೋರಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಕೃಷಿ ಆಯುಕ್ತರ ಪತ್ರದಲ್ಲಿ ಕೃಷಿ ಇಲಾಖೆಯ ಚಾಲ್ತಿ ಕಾರ್ಯಕ್ರಮಗಳ ಸಾವಯವ ಕೃಷಿ ಯೋಜನೆಯಡಿ, ಇಲ್ಲಿಯವರೆಗೂ ಸಾಧಿಸಿರುವ ಆರ್ಥಿಕ ಪ್ರಗತಿ ಹಾಗೂ ಪ್ರಸಕ್ತ ಸಾಲಿನ ಬದ್ಧ ವೆಚ್ಚ ಹೊರತು ಪಡಿಸಿ ಅಂದಾಜು ರೂ.30.00 ಕೋಟಿ ಅನುದಾನದಲ್ಲಿ ಪ್ರಸ್ತಾಪಿತ ಸಾವಯವ ಸಿರಿ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರದ ಅನುಮೋದನೆ ಮತ್ತು ಸೂಕ್ತ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ಕೃಷಿ ಅಯುಕ್ತರ ಪತ್ರದಲ್ಲಿ ಹೊಸ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮವಾದ "ಸಾವಯವ ಸಿರಿ" ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ರಾಜ್ಯಾದ್ಯಂತ ಪ್ರಾರಂಭಿಸಲು ವಿವರವಾದ ಮಾರ್ಗಸೂಚಿಗಳನ್ನು ನೀಡಿದ್ದು ಈ ಕೆಳಕಂಡಂತೆ ಅನುಬಂಧ -1 ರಿಂದ ಅನುಬಂಧ-8 ರವರೆಗಿನ ಅಂಶಗಳನ್ನೊಳಗೊಂಡಂತೆ ಸದರಿ ಮಾರ್ಗಸೂಚಿಗೆ ಸರ್ಕಾರದ ಆದೇಶ ಹೊರಡಿಸಲು ಕೋರಿರುತ್ತಾರೆ.

1. 2021-22ನೇ ಸಾಲಿನ ಆಯವ್ಯಯ ಘೋಷಣಾ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮವನ್ನು "ಸಾವಯವ ಸಿರಿ" ಯೋಜನೆಯನ್ನಾಗಿ ರಾಜ್ಯಾದ್ಯಂತ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದ್ದು, ಈ ಸಂಬಂಧ ಘೋಷಿಸಲಾಗಿರುವ ರೂ.500.00ಕೋಟಿ ಅನುದಾನಕ್ಕೆ ಹಾಗೂ ಇದೀಗ ಪರಿಷ್ಕೃತ ಘಟಕವಾರು ಹಂಚಿಕೆ ಮಾಡಲಾಗಿರುವ ಅನುದಾನದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

2. ಸಾವಯವ ಸಿರಿ ಯೋಜನೆಯನ್ನು ಮೂರು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸುವುದು. ಜಿಲ್ಲೆಗಳಲ್ಲಿ ಸಾವಯವ ಸಿರಿ ಯೋಜನೆಯನ್ನು ಮೂರು ಮಹಡಿ(ಹಂತದ) ಕಾರ್ಯಕ್ರಮವಾಗಿ ಅಂದರೆ (i) ಜಿಲ್ಲಾ ಮಟ್ಟದಲ್ಲಿ-ರಾಜ್ಯದ ನೋಂದಾಯಿತ ಸಾಮಾಜಿಕ ಸಂಸ್ಥೆಗಳ ಮುಖಾಂತರ (ii) ತಾಲ್ಲೂಕು ಮಟ್ಟದಲ್ಲಿ - ಸಾವಯವ ಕೃಷಿಕರ ಸಂಘ/ಸಂಸ್ಥೆ/ಒಕ್ಕೂಟಗಳ ಮುಖಾಂತರ ತಮ್ಮ ವ್ಯಾಪ್ತಿಯ ಕೃಷಿಕರನ್ನು ಉತ್ತೇಜಿಸಲು ಹಾಗೂ ಹೆಚ್ಚಿನ ರೈತರನ್ನು ಸಾವಯವ ಕೃಷಿಯ ವ್ಯಾಪ್ತಿಗೆ ಒಳಪಡಿಸಲು ಪ್ರತಿ ತಾಲ್ಲೂಕಿಗೆ 5-ಕ್ಷೇತ್ರಾಧಿಕಾರಿ ಹಾಗೂ 25-ಕ್ಷೇತ್ರ ಸಹಾಯಕಿಯರನ್ನು ನೇಮಕಗೊಳಿಸಲು ಮತ್ತು (iii) ಕ್ಷೇತ್ರ ಮಟ್ಟದಲ್ಲಿ-ಸಾವಯವ ಕೃಷಿಕರ ಮುಖಾಂತರ ಅನುಷ್ಠಾನಗೊಳಿಸುವುದು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

3. ಕ್ಷೇತ್ರ ಮಟ್ಟದಲ್ಲಿ ಆಯ್ಕೆಯಾಗುವ ಸಾವಯವ ಕೃಷಿಕರಿಗೆ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇ.75ರಷ್ಟು ಹಾಗೂ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ ಮತ್ತು ರೈತ ಮಹಿಳ ಫಲಾನುಭವಿಗಳಿಗೆ ಶೇ.90ರಷ್ಟು ಸಹಾಯಧನದಲ್ಲಿ ನೀಡಬಹುದಾದ ಸಾವಯವ ಕೃಷಿಗೆ ಪೂರಕವಾದ ಕಾರ್ಯಕ್ರಮ / ಘಟಕಗಳು ಹಾಗೂ ನೆರವಿನ ಪ್ರಮಾಣವನ್ನು ಅನುಬಂಧ-3a ರಲ್ಲಿ ಹಾಗೂ ಈ ಸಂಬಂಧದ ಅನುಷ್ಠಾನ ಮಾರ್ಗಸೂಚಿಗಳನ್ನು ಅನುಬಂಧ-3b ರಲ್ಲಿ ನೀಡಿರುವಂತೆ ಅನುಸರಿಸುವುದು.

..3

4. ಜಿಲ್ಲಾ ಮಟ್ಟದಲ್ಲಿ ನೊಂದಾಯಿತ ಸಾಮಾಜಿಕ ಸಂಸ್ಥೆಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡಲು ಅರ್ಜಿ ನಮೂನೆ, ಅರ್ಜಿ ತಪಾಸಣೆ ಮಾನದಂಡಗಳು ಮತ್ತು ಯೋಜನೆಯಡಿಯಲ್ಲಿ ಸಂಸ್ಥೆಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅನುಬಂಧ-4 ರಲ್ಲಿ ನೀಡಲಾಗಿದೆ.

5. ಯೋಜನೆಯ ಅನುಷ್ಠಾನದಲ್ಲಿ ಸಾಮಾಜಿಕ ಸಂಸ್ಥೆಗಳೊಂದಿಗೆ ಮಾಡಿಕೊಳ್ಳಬೇಕಾದ ಒಡಂಬಡಿಕೆ ಮತ್ತು ಆಯ್ಕೆಯಾಗುವ ಸಂಸ್ಥೆಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅನುಬಂಧ-5 ರಲ್ಲಿ ನೀಡಿರುವಂತೆ ಅನುಷ್ಠಾನಗೊಳಿಸುವುದು.

6. ತಾಲ್ಲೂಕು ಮಟ್ಟದಲ್ಲಿ ನೊಂದಾಯಿತ ಸಾವಯವ ಕೃಷಿಕರ ಸಂಘ/ಸಂಸ್ಥೆ/ಒಕ್ಕೂಟಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡುವುದು. ಸಂಘಗಳ ಆಯ್ಕೆಗಾಗಿ ಅರ್ಜಿ ನಮೂನೆ, ಅರ್ಜಿ ತಪಾಸಣೆ ಮಾನದಂಡಗಳು ಮತ್ತು ಯೋಜನೆಯಡಿಯಲ್ಲಿ ಸಂಘಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅನುಬಂಧ-6ರಲ್ಲಿ ನೀಡಲಾಗಿದೆ.

7. ಯೋಜನೆಯ ಉಸ್ತುವಾರಿ ಮತ್ತು ಮೌಲ್ಯಮಾಪನ ವ್ಯವಸ್ಥೆ ಅನುಬಂಧ-7 ರಲ್ಲಿ ನೀಡಿರುವಂತೆ ಅನುಸರಿಸುವುದು.

8. ಜಿಲ್ಲಾ ಮಟ್ಟದಲ್ಲಿ ಯೋಜನೆಯ ಉಸ್ತುವಾರಿಗಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಾವಯವ ಕೃಷಿ ಚಾಲನಾ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯ ಸದಸ್ಯರುಗಳ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅನುಬಂಧ-8 ರಲ್ಲಿ ನೀಡಲಾಗಿದೆ.

9. ಸರ್ಕಾರದ ಆದೇಶ ಸಂಖ್ಯೆ:ಕೃಇ/35/ಕೃಉಇ/2016, ಬೆಂಗಳೂರು, ದಿನಾಂಕ:16-08-2016 ರನ್ವಯ ಈ ಹಿಂದಿನ "ಸಾವಯವ ಭಾಗ್ಯ ಯೋಜನೆಯ ಬಲವರ್ಧನೆ ಹಾಗೂ ಪ್ರಾಂತೀಯ ಒಕ್ಕೂಟಗಳ ಅಭಿವೃದ್ಧಿ" ಯೋಜನೆಯಡಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ ಸಂಸ್ಥೆಯು(KAPPEC) ಅನುಷ್ಠಾನ ಸಂಸ್ಥೆಯಾಗಿ (Implementing Agency) ಕರ್ತವ್ಯ ನಿರ್ವಸುತ್ತಿದ್ದು, ಪ್ರಸ್ತಾವಿತ ಯೋಜನೆಯ ಕ್ರ.ಸಂ: ii ರಿಂದ X (ಅನುಬಂಧ-1)ರ ಪ್ರಸ್ತಾವನೆ ಆಧಾರಿತ ಕಾರ್ಯಕ್ರಮಗಳ ಅನುಷ್ಠಾನದಲ್ಲಿಯೂ ನೋಡಲ್ ಸಂಸ್ಥೆಯಾಗಿ ಮುಂದುವರೆಸುವುದು.

ಕೃಷಿ ಆಯುಕ್ತರ ದಿನಾಂಕ:05-02-2022ರ ಪತ್ರದಲ್ಲಿ 2021-22ನೇ ಸಾಲಿನ ಆಯವ್ಯಯ ಘೋಷಣೆ ಅನ್ವಯ ರಾಜ್ಯದಲ್ಲಿ ಹೊಸ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮವಾದ "ಸಾವಯವ ಸಿರಿ" ಯೋಜನೆ ಅನುಷ್ಠಾನಕ್ಕೆ ಸಿದ್ದಪಡಿಸಲಾಗಿರುವ ಮಾರ್ಗಸೂಚಿಯಲ್ಲಿ ಪ್ರತಿ ತಾಲ್ಲೂಕಿಗೆ 5-ಕ್ಷೇತ್ರಾಧಿಕಾರಿ ಹಾಗೂ 25-ಕ್ಷೇತ್ರ ಸಹಾಯಕಿಯರುಗಳ ಹುದ್ದೆಗಳು ಸೇರಿದಂತೆ ಒಟ್ಟು 237 ಹುದ್ದೆಗಳನ್ನು ಪಡೆಯುವ ಪ್ರಸ್ತಾವನೆಯನ್ನು ಹೊರತುಪಡಿಸಿ, ಪರಿಷ್ಕೃತ ಮಾರ್ಗಸೂಚಿಯನ್ನು ಸಲ್ಲಿಸಿ ಅನುಮೋದನೆಯನ್ನು ಕೋರಿರುತ್ತಾರೆ.

..4

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: AGRI-ACT/95/ 2021, ಬೆಂಗಳೂರು, ದಿನಾಂಕ: 08-02-2022

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-46ರ ಘೋಷಣೆಯಂತೆ, ಜನರಿಗೆ ಆರೋಗ್ಯಕರ ಹಾಗೂ ರಾಸಾಯನಿಕ ಮುಕ್ತ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳನ್ನು ದೊರಕಿಸಲು ಹಾಗೂ ಸಾವಯವ ಕೃಷಿಯನ್ನು ಉತ್ತೇಜಿಸಲು ರೂ.500.00 ಕೋಟಿಗಳ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸಾವಯವ ಕೃಷಿ ಮತ್ತು ಸಿರಿಧಾನ್ಯಗಳ ಕಾರ್ಯಕ್ರಮಗಳು, ಲೆಕ್ಕ ಶೀರ್ಷಿಕೆ: 2410-00-104-0-12 ರಡಿ ಲಭ್ಯವಿರುವ ರೂ.50.00 ಕೋಟಿಗಳ (ರೂಪಾಯಿಗಳು ಐವತ್ತು ಕೋಟಿಗಳು ಮಾತ್ರ) ಅನುದಾನದಲ್ಲಿ ವೆಚ್ಚವನ್ನು ಭರಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-51ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಾವಯವ ಮತ್ತು ಸಿರಿಧಾನ್ಯಗಳನ್ನು ವೈಜ್ಞಾನಿಕವಾಗಿ ಮಾರಾಟ ಮಾಡಲು ಹಾಗೂ ರೈತರಿಗೆ ಗರಿಷ್ಠ ಬೆಲೆ ದೊರಕಿಸಲು ರಾಷ್ಟ್ರೀಯ ಇ-ಮಾರುಕಟ್ಟೆ ಲಿಮಿಟೆಡ್ ಮೂಲಕ ಅವಕಾಶ ಕಲ್ಪಿಸಲಾಗುವುದು ಎಂದು ಘೋಷಿಸಿರುವ ಕಾರ್ಯಕ್ರಮಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಹಾಗೂ ಈ ಯೋಜನೆಗೆ 2 ವರ್ಷಗಳ ಅವಧಿಗೆ ತಗಲುವ ವೆಚ್ಚ ರೂ.230.00 ಲಕ್ಷಗಳನ್ನು (ರೂಪಾಯಿಗಳು ಇನ್ನೂರ ಮೂವತ್ತು ಲಕ್ಷಗಳು ಮಾತ್ರ) ಸಾವಯವ ಕೃಷಿ ಮತ್ತು ಸಿರಿಧಾನ್ಯಗಳ ಕಾರ್ಯಕ್ರಮ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿಯೇ ಭರಿಸಲು ಆದೇಶಿಸಿದೆ.

ಮೇಲೆ ತಿಳಿಸಿರುವಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಇದರೊಂದಿಗೆ ಲಗತ್ತಿಸಿರುವ ಮಾರ್ಗಸೂಚಿಯ ಅನುಬಂಧ-1, 2, 3, 3a, 4, 4a, 5, 5a, 5b, 6, 6a, 6b, 7 ಮತ್ತು 8 ರನ್ವಯ ಮಂಜೂರಾತಿ ನೀಡಿ ಆದೇಶಿಸಿದೆ.

ಈ ಯೋಜನೆಯಡಿ Grant-In-Aid ಬಿಲ್ಲುಗಳಿಗೆ ಮೇಲು ಸಹಿ ಮಾಡುವ ಅಧಿಕಾರವನ್ನು ಕೃಷಿ ಆಯುಕ್ತರಿಗೆ ನೀಡಿದೆ.

ಈ ಯೋಜನೆಯಡಿ ಸ್ವಾಯತ್ತ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವ ಮೊದಲು ಅವುಗಳ ಅನುಭವ ಮತ್ತು ಸಾಮರ್ಥ್ಯದ ಬಗ್ಗೆ ಹಾಗೂ ಅನುದಾನವು ಫಲಪ್ರದವಾಗಿ ವಿನಿಯೋಗವಾಗುವ ಬಗ್ಗೆ ಖಚಿತಪಡಿಸಕೊಳ್ಳತಕ್ಕದ್ದು ಹಾಗೂ ಬೇರಾವುದೇ ಯೋಜನೆಯ ಮೊತ್ತವನ್ನು ಈ ಖಾತೆಗೆ ಜಮ ಮಾಡದಿರುವ ಷರತ್ತಿಗೊಳಪಟ್ಟು ಜಿಲ್ಲೆಯ ಆ ವಿಭಾಗದ ಉಪ ಕೃಷಿ ನಿರ್ದೇಶಕರು ಹಾಗೂ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆಗಳ ಪ್ರತಿನಿಧಿಯ ಹೆಸರಿನಲ್ಲಿ 2021-22 ನೇ ಸಾಲಿಗೆ ಮಾತ್ರ ಜಂಟಿ ಬ್ಯಾಂಕ್ ಖಾತೆ ತೆರೆಯಲು ಅನುಮೋದಿಸಿದೆ.

ಈ ಯೋಜನೆಯ ಉದ್ದೇಶಕ್ಕಾಗಿ ನಿಗಧಿಪಡಿಸಿದ ಮೊತ್ತವನ್ನು ಬಳಸಿಕೊಂಡ ನಂತರ ಈ ಜಂಟಿ ಖಾತೆಯನ್ನು ಮುಕ್ತಾಯಗೊಳಿಸುವುದು. ಈ ಖಾತೆಯಲ್ಲಿ ಸ್ವೀಕೃತವಾದ ಬಡ್ಡಿಯ ಮೊತ್ತವನ್ನು "0049 -04-800-6-01" ರಡಿ ಜಮೆ ಮಾಡುವುದು ಹಾಗೂ 2022-23 ನೇ ಸಾಲಿನಲ್ಲಿ ಸದರಿ ಯೋಜನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ ಆಇ 37 ಟಿ ಎಆರ್ 2021, ದಿ: 26-07-2021 ರಲ್ಲಿ ತಿಳಿಸಿರುವಂತೆ DBT Platform ಮೂಲಕ ಅನುಷ್ಠಾನಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿಯ ಸಂಖ್ಯೆ: ಆಇ 234 ವೆಚ್ಚ-4/2021, ದಿನಾಂಕ: 10-08-2021, ದಿನಾಂಕ:16-09-2021 ಹಾಗೂ ದಿನಾಂಕ: 01-12-2021, , ಮತ್ತು ಸಂ: ಆಇ 52 ವೆಚ್ಚ-4 2022, ದಿನಾಂಕ:03-02-2022 ಹಾಗೂ ಸಂಖ್ಯೆ: ಆಇ 425 ವೆಚ್ಚ-4/2021, ದಿನಾಂಕ:03-02-2022 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: PDS-PFO/34/2021, ದಿನಾಂಕ:20-11-2021 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

P. [signature] 08/04/22
(ಪಿ. ಸತ್ಯಭಾಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ(ಯೋಜನೆ).

**ಇವರಿಗೆ,**

1. ಮಹಾಲೇಖಪಾಲರು, (ಜಿ & ಎಸ್ಎಸ್ಎ) / (ಇ & ಆರ್ಎಸ್ಎ) / (ಎ ಮತ್ತು ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಕೃಷಿ ಆಯುಕ್ತರು / ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
6. ಜಂಟಿ ನಿರ್ದೇಶಕರು, ರಾಜ್ಯ ಹೂಜೂರು ಖಜಾನೆ, ಬೆಂಗಳೂರು.
7. ಶಾಖೆಯ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ</u>:

1. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ - 2 ರವರ ಆಪ್ತ ಸಹಾಯಕ, ಕೃಷಿ ಇಲಾಖೆ.
4. ಸರ್ಕಾರದ ಉಪ ಕಾರ್ಯದರ್ಶಿ, ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ.
5. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-4 ಮತ್ತು 5) ಆರ್ಥಿಕ ಇಲಾಖೆ, ವಿಧಾನಸೌಧ.

# ಸರ್ಕಾರದ ಆದೇಶ ಸಂಖ್ಯೆ:AGRI-ACT/95/2021, ದಿನಾಂಕ: 08.02.2022

# "ಸಾವಯವ ಸಿರಿ" ಯೋಜನೆಯ ವಿವರವಾದ ಅನುಷ್ಠಾನ ಮಾರ್ಗಸೂಚಿ

**ಪೀಠಿಕೆ:**

**2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು "ಜನರಿಗೆ ಆರೋಗ್ಯಕರ ಹಾಗೂ ರಾಸಾಯನಿಕ ಮುಕ್ತ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ದೊರಕಿಸಲು ಹಾಗೂ ಸಾವಯವ ಕೃಷಿಯನ್ನು ಉತ್ತೇಜಿಸಲು ರೂ.500.00ಕೋಟಿ ಗಳ ಯೋಜನೆಯನ್ನು ರೂಪಿಸಲಾಗುವುದು" ಎಂದು ತಿಳಿಸಿರುತ್ತಾರೆ, ತದನಂತರ ಸರ್ಕಾರದ ನಿರ್ದೇಶನ ಮೇರೆಗೆ ಸಿದ್ಧಪಡಿಸಲಾಗಿರುವ ಪರಿಷ್ಕೃತ ಕ್ರಿಯಾ ಯೋಜನೆ ಈ ಕೆಳಕಂಡಂತಿರುತ್ತದೆ.**

## ಅನುಬಂಧ-1

**2021-22 ನೇ ಸಾಲಿನ ಸಾವಯವ ಕೃಷಿ ಕಾರ್ಯಕ್ರಮಗಳು (ಪರಿಷ್ಕೃತ)**

| ಕ್ರ. ಸಂ | ಕಾರ್ಯಕ್ರಮಗಳು | ಭೌತಿಕ | ಆರ್ಥಿಕ (ರೂ. ಕೋಟಿಗಳಲ್ಲಿ) | ಪರಿಷ್ಕೃತ (ರೂ. ಕೋಟಿಗಳಲ್ಲಿ) |
|---|---|---|---|---|
| 1. | "ಸಾವಯವ ಸಿರಿ ಯೋಜನೆ" (ಮೂರು ಮಹಡಿಯ ಕಾರ್ಯಕ್ರಮ) | | | |
| | **ಅ) ಜಿಲ್ಲಾ ಮಟ್ಟ- ರಾಜ್ಯದ ನೋಂದಾಯಿತ ಸಾಮಾಜಿಕ ಸಂಸ್ಥೆಗಳು:** **ರಾಜ್ಯದಲ್ಲಿ ಸಾವಯವ ಕೃಷಿಯ ಉತ್ತೇಜನದಲ್ಲಿ ಈಗಾಗಲೇ ತೊಡಗಿರುವ ನೊಂದಾಯಿತ ಸಾಮಾಜಿಕ ಸಂಸ್ಥೆಗಳಿಗೆ** ಸಾವಯವ ಕೃಷಿಯಲ್ಲಿ ಪ್ರಚಾರ/ ತರಬೇತಿ/ಅಧ್ಯಯನ ಪ್ರವಾಸ/ಮಾದರಿ ಸಾವಯವ ಕ್ಷೇತ್ರ ಸ್ಥಾಪನೆ/ಸಾವಯವ ಕ್ಷೇತ್ರೋತ್ಸವ/ ಪ್ರಮಾಣೀಕರಣ/ ಮಾರಾಟ ಮಳಿಗೆ ಸ್ಥಾಪನೆ, ದೇಸಿ/ಸ್ಥಳೀಯ/ನಾಟಿ ತಳಿಗಳ ವಿತರಣೆ/ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಸಮುದಾಯ ಬೀಜ ಬ್ಯಾಂಕ್ ಗಳ ಸ್ಥಾಪನೆ, ಗೋಶಾಲಾ ಸ್ಥಾಪನೆ ಮತ್ತು ಗೋಸಂರಕ್ಷಣೆ, "ನಮ್ಮ ಹೊಲ ನಮ್ಮ ಕೆರೆ" ಇತರೆ ಸಂಬಂಧಿತ ಕಾರ್ಯಕ್ರಮಗಳಿಗಾಗಿ– ಪ್ರತಿ ಸಂಸ್ಥೆಗೆ ಗರಿಷ್ಠ ರೂ 50.00 ಲಕ್ಷ<br>ಷರಾ: ಪ್ರಸ್ತಾವನೆ ಆಧಾರಿತವಾಗಿದ್ದು, ಸಂಬಂಧಿಸಿದ ಕೃವಿವಿ/ಕೃ & ತೋ/ ತೋಟಗಾರಿಕೆ ವಿ.ವಿ/ಪಶುಸಂಗೋಪನೆ ವಿ.ವಿ. ಗಳ/ ಸ್ಥಳೀಯ ಕೆ.ವಿ.ಕೆ ಗಳ ಶಿಫಾರಸು ಮತ್ತು ಸಹಯೋಗದೊಂದಿಗೆ | 50 | 25.00 | 3.00 |
| | **ಆ) ತಾಲ್ಲೂಕು ಮಟ್ಟ - ಸಾವಯವ ಕೃಷಿಕರ ಸಂಘ/ ಸಾವಯವ ಒಕ್ಕೂಟಗಳು:** ಸಾವಯವ ಕೃಷಿಯ ಉತ್ತೇಜನದಲ್ಲಿ ಈಗಾಗಲೇ ತೊಡಗಿರುವ ನೋಂದಾಯಿತ ಸಾವಯವ ಕೃಷಿಕರ ಸಂಘ/ ಸಾವಯವ ಒಕ್ಕೂಟಗಳ ಮುಖಾಂತರ ತಮ್ಮ ವ್ಯಾಪ್ತಿಯ ಕೃಷಿಕರನ್ನು ಉತ್ತೇಜಿಸಿ ಹೆಚ್ಚಿನ ರೈತರನ್ನು ಸಾವಯವ ಕೃಷಿ ವ್ಯಾಪ್ತಿಗೆ ಒಳಪಡಿಸಲು ಆಡಳಿತಾತ್ಮಕ ವೆಚ್ಚ | 237 ತಾಲ್ಲೂಕು | 11.50 | 0.00 |

25



127

| | | | | |
|---|---|---|---|---|
| | **ಇ) ಕ್ಷೇತ್ರ ಮಟ್ಟ - ಸಾವಯವ ಕೃಷಿಕರಿಗೆ:** ಸಾವಯವ ಕೃಷಿಯನ್ನು ಅಳವಡಿಸಿಕೊಂಡಿರುವ/ ಅಳವಡಿಸಿಕೊಳ್ಳುವ **ಆಸಕ್ತಿ ಇರುವ ಸಾವಯವ ಕೃಷಿಕರಿಗೆ** ಸಾವಯವ ಕೃಷಿಗೆ ಪೂರಕವಾದ ಘಟಕಗಳ (ಅನುಬಂಧದಲ್ಲಿ ಇರುವಂತೆ) ಅನುಷ್ಠಾನಕ್ಕೆ ಸಹಾಯಧನ ನೀಡುವುದು. **ಷರಾ: ತಾಲ್ಲೂಕು ಮಟ್ಟದಲ್ಲಿ ಆಯ್ಕೆಯಾಗುವ ಸಂಘ/ಸಂಸ್ಥೆಗಳ ಸಹಯೋಗದೊಂದಿಗೆ** | **201450 ರೈತರು** (237*850) ಸಂಖ್ಯೆ | 381.50 | 14.00 |
| II. | **2021-22 ನೇ ಸಾಲಿನ ಘೋಷಣಾ ಕಾರ್ಯಕ್ರಮ:** ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳಿಗೆ ವ್ಯವಸ್ಥಿತ ಮಾರುಕಟ್ಟೆ ಕಲ್ಪಿಸಲು ತತ್ರಾಂಶಗಳ ಅಭಿವೃದ್ಧಿ ಮತ್ತು ಇನ್ನಿತರೆ ಸಂಬಂಧಿತ ಚಟುವಟಿಕೆಗಳು | | 2.50 | 1.00 |
| III. | **ಸರ್ಕಾರಿ ಯೋಜನೆಗಳಡಿ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳು:** ರಾಜ್ಯದ ಸಿರಿಧಾನ್ಯ ಹಾಗೂ ಪೌಷ್ಠಿಕಭರಿತ ಸ್ಥಳೀಯ ತಳಿಗಳಿಗೆ ಉತ್ತೇಜನ ಹಾಗೂ ಮಾರುಕಟ್ಟೆ ನೀಡಲು ಸರ್ಕಾರದ ಬಿಸಿ ಊಟ, ಕ್ಷೀರ ಭಾಗ್ಯ ಹಾಗೂ ಇನ್ನಿತರೆ ಯೋಜನೆಗಳಡಿ ವಿತರಣೆ **ಷರಾ: ಸಾರ್ವಜನಿಕ ಶಿಕ್ಷಣ ಇಲಾಖೆ, ಕೆಎಂಎಫ್ ಇತರೆ ಸಂಬಂಧಿತ ಇಲಾಖೆ/ಸಂಸ್ಥೆ ಮುಖಾಂತರ** | | 10.00 | 5.00 |
| IV. | **ತೋಟಗಾರಿಕಾ ಬೆಳೆಗಳಲ್ಲಿ ಸಾವಯವ ಕೃಷಿ ಉತ್ತೇಜನ** - ತೋಟಗಾರಿಕೆ ಇಲಾಖೆ ಮುಖಾಂತರ (ಪ್ರತಿ ತಾಲ್ಲೂಕಿಗೆ 125ಹೆ. ಪ್ರದೇಶದಲ್ಲಿ) | 25000ಹೆ. | 2.50 | 1.00 |
| V. | **ಸಾವಯವ ಬೀಜೋತ್ಪಾದನೆ-** ಪ್ರಸ್ತಾವನೆ ಆಧಾರಿತ ರಾಜ್ಯದ ಕೃಷಿ/ತೋಟಗಾರಿಕೆ/ಕೃಷಿ & ತೋಟಗಾರಿಕೆ / ಪಶುಸಂಗೋಪನ ವಿಶ್ವ ವಿದ್ಯಾನಿಲಯಗಳಿಂದ /ಪ್ರಗತಿಪರ ರೈತರಿಂದ (ಸಂಬಂಧಿಸಿದ ಕೃವಿವಿ/ ತೋ.ವಿ ಗಳ ಸಹಯೋಗದೊಂದಿಗೆ). | 10 | 5.00 | 1.00 |
| VI. | **ನವೀನ ಹಾಗೂ ವಿನೂತನ ಯೋಜನಾ ಪ್ರಸ್ತಾವನೆಗಳು:** ಸಾವಯವ ಕೃಷಿ/ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಸಾರಿಗೆ, ಮಾರುಕಟ್ಟೆ ಹಾಗೂ ರಫ್ತು ಮತ್ತಿತರೆ ಸಂಬಂಧಿತ ಚಟುವಟಿಕೆಗಳಿಗೆ ಸಾವಯವ ಸಂಘ-ಸಂಸ್ಥೆಗಳಿಗೆ ಶೇ.50ರ ಸಹಾಯಧನ – ರಾಜ್ಯ ಮಟ್ಟದ ಸಮಿತಿಯ ತೀರ್ಮಾನದ ಮೇರೆಗೆ ನಿರ್ಧರಿಸುವುದು. **ಷರಾ: ಪ್ರಸ್ತಾವನೆ ಆಧಾರಿತ -ಕೆಪೆಕ್ ಸಂಸ್ಥೆ/ತೋಟಗಾರಿಕೆ ಇಲಾಖೆ ಮುಖಾಂತರ ಅನುಷ್ಠಾನ** | ಪ್ರಸ್ತಾವನೆ ಆಧಾರಿತ | 10.00 | 0.00 |
| VII. | **ಇತರೆ ಕಾರ್ಯಕ್ರಮಗಳು** | | | |
| | **ಅ) ರಾಜ್ಯದ ಕೃವಿವಿ/ತೋವಿವಿ/ ಪಶುಸಂಗೋಪನೆ ವಿ.ವಿಗಳಲ್ಲಿ ಮಾದರಿ ಸಾವಯವ ಕ್ಷೇತ್ರ ಸ್ಥಾಪನೆ/ ಖಾಯಂ ವಸ್ತುಪ್ರದರ್ಶನ ಕೇಂದ್ರ ಸ್ಥಾಪನೆ:** ರಾಜ್ಯದ ರಾಜ್ಯದ ಕೃವಿವಿ/ತೋವಿವಿ/ ಪಶುಸಂಗೋಪನೆ ವಿವಿಗಳಲ್ಲಿ/ ಸಂಶೋಧನ ಕೇಂದ್ರಗಳಲ್ಲಿ /ಕೆ.ವಿ.ಕೆ.ಗಳಲ್ಲಿ ಕನಿಷ್ಠ 40 ಹೆ ಪ್ರದೇಶದಲ್ಲಿ ಸಾವಯವ ತತ್ವಗಳ ಆಧಾರಿತ ಮಾದರಿ ತಾಕುಗಳನ್ನು ಅಭಿವೃದ್ಧಿಪಡಿಸುವುದು ಮತ್ತು ವಸ್ತುಪ್ರದರ್ಶನ ಕೇಂದ್ರ ಸ್ಥಾಪನೆಗಾಗಿ (ಕಟ್ಟಡಗಳ ನಿರ್ಮಾಣ ಕಾಮಗಾರಿಗೆ ಅವಕಾಶವಿರುವುದಿಲ್ಲ) ಗರಿಷ್ಠ ರೂ.50.00 ಲಕ್ಷ. | 10 | 5.00 | 0.00 |

| | | | | |
|---|---|---|---|---|
| | ಷರಾಃ ಪ್ರಸ್ತಾವನೆ ಆಧಾರಿತ ರಾಜ್ಯದ ಕೃವಿವಿ/ತೋವಿವಿ/ ಪಶುಸಂಗೋಪನೆ ವಿವಿಗಳಿಂದ | | | |
| | **ಆ) ರೈತರ ಕ್ಷೇತ್ರಗಳಲ್ಲಿ ಪಾಠಶಾಲೆ ಮತ್ತು ಗ್ರಾಮೀಣ ಪ್ರವಾಸ ತಾಣ ಅಭಿವೃದ್ಧಿ:** ಪ್ರಗತಿಪರ ಸಾವಯವ ಕೃಷಿಕರ ಕ್ಷೇತ್ರವನ್ನೇ ರೈತರ ಪಾಠಶಾಲೆಯನ್ನಾಗಿ ಪರಿವರ್ತಿಸುವುದು (ಗರಿಷ್ಠ ರೂ.1.00 ಲಕ್ಷ) | ಪ್ರಸ್ತಾವನೆ ಆಧಾರಿತ | 3.00 | 0.00 |
| | ಇ)ಈಗಾಗಲೇ ಅಭಿವೃದ್ಧಿಯಾಗಿರುವ ಸಾವಯವ ಕೃಷಿ ಕ್ಷೇತ್ರಗಳಲ್ಲಿ- ಸಾವಯವ ಕೃಷಿ ಪದ್ಧತಿ, **ದೇಸಿ/ಸ್ಥಳೀಯ/ನಾಟಿ ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿ**, ಗೋಶಾಲಾ ಮತ್ತು ಗೋಸಂರಕ್ಷಣೆ ಒಳಗೊಂಡಂತೆ **ಸಾವಯವ ಕೃಷಿ ಗ್ರಾಮೀಣ ಪ್ರವಾಸ ತಾಣವಾಗಿ** ಅಭಿವೃದ್ಧಿ ಪಡಿಸಲು/ಪರಿಸರ ಪ್ರವಾಸೋದ್ಯಮ ಮೂಲಭೂತ ಸೌಕರ್ಯ ಸೃಷ್ಟಿಗೆ **ಷರಾಃ ಪ್ರಸ್ತಾವನೆ ಆಧಾರಿತ ಆ ವ್ಯಾಪ್ತಿಯ ಕೃವಿವಿಗಳ ಸಹಯೋಗದೊಂದಿಗೆ** | ಪ್ರಸ್ತಾವನೆ ಆಧಾರಿತ | 10.00 | 0.00 |
| VIII. | ಗ್ರಾಮೀಣ ಪ್ರದೇಶಗಳಲ್ಲಿ ತ್ಯಾಜ್ಯ ನಿರ್ವಹಣೆ-ಹಸಿ **ಕಸದಿಂದ ಗೊಬ್ಬರ ತಯಾರಿಕೆ-ಪ್ರಸ್ತಾವನೆ ಆಧಾರಿತ - ಕೃಷಿ ಇಲಾಖೆಯ ಮುಖಾಂತರ ಶೇ.100ರ ಪ್ರೋತ್ಸಾಹಧನದೊಂದಿಗೆ.** | 30 | 30.00 | 4.00 |
| IX . | ದೇಸಿ ರಾಸುಗಳ **ಗೋಮೂತ್ರ, ಸಗಣಿ ಉತ್ಪನ್ನಗಳ ಮೌಲ್ಯವರ್ಧನೆ** ಚಟುವಟಿಕೆಗಳಿಗೆ ಪ್ರೋತ್ಸಾಹ ಪ್ರತಿ ಘಟಕಕ್ಕೆ ಗರಿಷ್ಠ ರೂ.1.00 ಲಕ್ಷ ಪ್ರೋತ್ಸಾಹಧನ **ಷರಾಃ -ಪ್ರಸ್ತಾವನೆ ಆಧಾರಿತ** ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಮುಖಾಂತರ | 50 | 0.50 | 0.00 |
| X. | ಕೃಷಿ/ತೋಟಗಾರಿಕೆ/ಪಶುಸಂಗೋಪನೆ/ರೇಷ್ಮೆ ಪದವೀಧರರು ನೂತನ ಜೈವಿಕ ಗೊಬ್ಬರ/ಪೀಡೆನಾಶಕಗಳ ಉತ್ಪಾದನ ಘಟಕ ಪ್ರಾರಂಭಿಸಲು **ಷರಾಃ-ಪ್ರಸ್ತಾವನೆ ಆಧಾರಿತ** ಕೇಂದ್ರ ಸರ್ಕಾರದ RCOF ಸಂಸ್ಥೆಯ ಮುಖಾಂತರ | ಪ್ರಸ್ತಾವನೆ ಆಧಾರಿತ | 1.50 | 0.00 |
| XI. | **ಆಡಳಿತಾತ್ಮಕ ವೆಚ್ಚಗಳು** | | | |
| | **1. ಸಾವಯವ ಕೃಷಿ ಕಾರ್ಯಕ್ರಮಗಳ ಪ್ರಚಾರ ಮತ್ತು ಗ್ರಾಹಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳು** ಸಾವಯವ ಕೃಷಿಯ ವಿವಿಧ ತಾಂತ್ರಿಕತೆಗಳು ಮತ್ತು ಯಶೋಗಾಥೆಗಳ ಬಗ್ಗೆ ವಿವಿಧ ರೀತಿಯ ಪ್ರಚಾರ ಪ್ರಕಟಣೆ, ಡಿಜಿಟಲ್ ಪ್ರಚಾರ, ಖರೀದಿ-ಗೋಡೆಬರಹ, ಆಕಾಶವಾಣಿ ಮತ್ತು ದೂರದರ್ಶನದ ಪ್ರಾಯೋಜಿತ ಕಾರ್ಯಕ್ರಮಗಳು, ಮೇಳ/ವಸ್ತು ಪ್ರದರ್ಶನ/ ಕಾರ್ಯಾಗಾರ ಆಯೋಜನೆ ಮತ್ತು ಭಾಗವಹಿಸುವಿಕೆ, ಆಂದೋಲನಾ ಮಾದರಿಯ ಪ್ರಚಾರ, ಶಾಲೆಗಳಲ್ಲಿ ಪ್ರಚಾರ ಇತರೆ ಸಂಬಂಧಿತ ವೆಚ್ಚಗಳು ಹಾಗೂ ಯಾವುದೇ ಸಂಬಂಧಿತ **ವಿನೂತನ ಪ್ರಸ್ತಾವನೆಗಳು.** | | 2.0 | 1.00 |
| | 2. ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಅಧ್ಯಕ್ಷರು, ಸದಸ್ಯರುಗಳು, ಆಪ್ತ ಸಿಬ್ಬಂದಿ/ ಇಲಾಖೆಯ ಅಧಿಕಾರಿಗಳ ಅಂತರರಾಜ್ಯ/ ರಾಷ್ಟ್ರೀಯ/ಅಂತರರಾಷ್ಟ್ರೀಯ ತರಬೇತಿ/ ಕಾರ್ಯಾಗಾರ/ ಅಧ್ಯಯನ ಪ್ರವಾಸದ ವೆಚ್ಚಗಳು ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿ ಅಧ್ಯಕ್ಷರು, ಸದಸ್ಯರುಗಳು ಮತ್ತು ಅಧ್ಯಕ್ಷರ ಆಪ್ತ ಸಿಬ್ಬಂದಿಯ ವೇತನ | | | 0.00 |

| | | | | |
|---|---|---|---|---|
| | /ಭತ್ಯೆಗಳು, /ಗೌರವಧನ/ಸಂಭಾವನೆ, ಪೆಟ್ರೋಲ್/ ಡೀಸೆಲ್/ ಆಯಿಲ್/ವಾಹನ ದುರಸ್ಥಿ, ದೂರವಾಣಿ ವೆಚ್ಚ, ನಿರ್ವಹಣೆ, ಮತ್ತು ಇತ್ಯಾದಿ ವೆಚ್ಚಗಳು. | | | |
| | **3.** ಸಾವಯವ ಕೃಷಿ ಉನ್ನತಮಟ್ಟದ ಸಮಿತಿ ವತಿಯಿಂದ ಆಯೋಜಿಸುವ ಸಭೆ ಸಮಾರಂಭಗಳು, ಜಿಲ್ಲಾಮಟ್ಟದ ಸಾವಯವ ಚಾಲನಾ ಸಮಿತಿ ಸಭೆ ಮತ್ತು ಇತರೆ ಸಭೆಗಳ ವೆಚ್ಚ/ಯೋಜನಾ ಅನುಷ್ಠಾನ ಆಡಳಿತಾತ್ಮಕ ವೆಚ್ಚ, ಹಾಗೂ ಸಾವಯವ ಕೃಷಿ ಘಟಕದ ಆಡಳಿತಾತ್ಮಕ ವೆಚ್ಚಗಳು, ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯು ಅನುಮೋದನೆ ಮೇರೆಗೆ ಭರಿಸಬೇಕಾದ ಸಂಬಂಧಿತ ಯಾವುದೇ ಪ್ರಸ್ತಾವನೆಗಳ ವೆಚ್ಚ ಹಾಗೂ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳ ಉಸ್ತುವಾರಿ ಮತ್ತು ಮೌಲ್ಯಮಾಪನ (ಬಾಹ್ಯ ಸಂಸ್ಥೆಗಳಿಂದ) | | | 0.00 |
| | **ಒಟ್ಟು** | | **500.00** | **30.00** |

**ಷರಾ: ಮೇಲ್ಕಂಡ ಎಲ್ಲಾ ಘಟಕ ವೆಚ್ಚಗಳು ತಾತ್ಕಾಲಿಕವಾಗಿದ್ದು, ಅಂತರ ಘಟಕ ಬದಲಾವಣೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಎಲ್ಲಾ ಪ್ರಸ್ತಾವನೆ ಆಧಾರಿತ ಕಾರ್ಯಕ್ರಮಗಳಡಿ ಸ್ವೀಕರಿಸಲಾಗುವ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯು ಅಖೈರುಗೊಳಿಸುವ ತಜ್ಞರ ಸಮಿತಿ (Expert committee)ಯಿಂದ ಪರಿಶೀಲಿಸಿ ಅದರ ಶಿಫಾರಸ್ಸಿನಂತೆ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಅನುಮೋದನೆಯೊಂದಿಗೆ ಸಹಾಯಧನ ಸಂಬಂಧಿತ ಅನುಷ್ಠಾನ ಸಂಸ್ಥೆಯ ಮೂಲಕ ಒದಗಿಸುವುದು.**

## ಅನುಬಂಧ-2
## ಸಾವಯವ ಸಿರಿ ಯೋಜನೆಯ ಅನುಷ್ಠಾನ ಮಾರ್ಗಸೂಚಿಗಳು:

### I. "ಸಾವಯವ ಸಿರಿ" ಯೋಜನೆ ಅನುಷ್ಠಾನ: ಮೂರು ಮಹಡಿಯ (ಹಂತ) ಕಾರ್ಯಕ್ರಮ.

### ಅ) ಮೊದಲನೇ ಹಂತ – ಜಿಲ್ಲಾ ಮಟ್ಟದಲ್ಲಿ ರಾಜ್ಯದ ನೋಂದಾಯಿತ ಸಾಮಾಜಿಕ ಸಂಸ್ಥೆಗಳ ಮುಖಾಂತರ:

ಸಾಮಾಜಿಕ ಸಂಸ್ಥೆಯೆಂದರೆ ಒಂದು ಸಾಮಾನ್ಯ ಉದ್ದೇಶಕ್ಕಾಗಿ ಒಟ್ಟುಗೂಡಿದ ಜನರ ಗುಂಪನ್ನು ಒಳಗೊಂಡಿದ್ದು ಸಮಾಜದ ಸಾಮಾಜಿಕ ಕ್ರಮದ ಒಂದು ಭಾಗವಾಗಿದೆ ಮತ್ತು ಅವು ವ್ಯಕ್ತಿಗಳ ನಡವಳಿಕೆ ಮತ್ತು ನಿರೀಕ್ಷೆಗಳನ್ನು ನಿಯಂತ್ರಿಸುತ್ತವೆ. ಸಾಮಾಜಿಕ ಸಂಸ್ಥೆಯು ಸಾಮಾಜಿಕ ಪಾತ್ರಗಳು ಮತ್ತು ಸಾಮಾಜಿಕ ಮಾನದಂಡಗಳ ಪರಸ್ಪರ ಸಂಬಂಧ ಹೊಂದಿರುವ ವ್ಯವಸ್ಥೆಯಾಗಿದ್ದು, ಮೂಲಭೂತ ಸಾಮಾಜಿಕ ಅಗತ್ಯಗಳ ಮೇಲೆ ಕೇಂದ್ರೀಕೃತವಾಗಿರುವ ನಂಬಿಕೆಗಳು ಮತ್ತು ನಡವಳಿಕೆಯ ಸಂಘಟಿತ ಮಾದರಿಗಳಾಗಿವೆ.

ರಾಜ್ಯದಲ್ಲಿ ಸಾವಯವ ಕೃಷಿಯ ಉತ್ತೇಜನದಲ್ಲಿ ಈಗಾಗಲೇ ತೊಡಗಿರುವ ನೊಂದಾಯಿತ ಸಾಮಾಜಿಕ ಸಂಸ್ಥೆಗಳಿಗೆ ಸಾವಯವ ಕೃಷಿಯಲ್ಲಿ ಪ್ರಚಾರ/ ತರಬೇತಿ/ ಅಧ್ಯಯನ ಪ್ರವಾಸ/ ಮಾದರಿ ಸಾವಯವ ಕ್ಷೇತ್ರ ಸ್ಥಾಪನೆ/ಸಾವಯವ ಕ್ಷೇತ್ರೋತ್ಸವ/ ಪ್ರಮಾಣೀಕರಣ/ ಮಾರಾಟ ಮಳಿಗೆ ಸ್ಥಾಪನೆ, ದೇಸಿ/ಸ್ಥಳೀಯ/ನಾಟಿ ತಳಿಗಳ ವಿತರಣೆ/ ಸಂರಕ್ಷಣೆ ಮತ್ತು ಅಭಿವೃದ್ಧಿ, ಸಮುದಾಯ ಬೀಜ ಬ್ಯಾಂಕ್ ಗಳ ಸ್ಥಾಪನೆ, ಗೋಶಾಲಾ ಸ್ಥಾಪನೆ ಮತ್ತು ಗೋಸಂರಕ್ಷಣೆ, ನಮ್ಮ ಹೊಲ ನಮ್ಮ ಕೆರೆ ಇತರೆ ಸಂಬಂಧಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುದಾನ ಒದಗಿಸಲಾಗುವುದು.

ಈ ಸಂಬಂಧ ಜಿಲ್ಲೆಗಳಿಗೆ ಬಿಡುಗಡೆಯಾಗುವ ಅನುದಾನವನ್ನು, ಸ್ವಾಯತ್ತ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವ ಮೊದಲು ಅವುಗಳ ಅನುಭವ ಮತ್ತು ಸಾಮರ್ಥ್ಯದ ಬಗ್ಗೆ ಹಾಗೂ ಅನುದಾನವು ಫಲಪ್ರದವಾಗಿ ವಿನಿಯೋಗವಾಗುವ ಬಗ್ಗೆ ಖಚಿತಪಡಿಸಕೊಳ್ಳತಕ್ಕದ್ದು ಹಾಗೂ ಬೇರಾವುದೇ ಯೋಜನೆಯ ಮೊತ್ತವನ್ನು ಈ ಖಾತೆಗೆ ಜಮೆ ಮಾಡದಿರುವ ಷರತ್ತಿಗೊಳಪಟ್ಟು ಜಿಲ್ಲೆಯ ಆ ವಿಭಾಗದ ಉಪ ಕೃಷಿ ನಿರ್ದೇಶಕರು ಹಾಗೂ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆಗಳ ಪ್ರತಿನಿಧಿಯ ಹೆಸರಿನಲ್ಲಿ 2021-22 ನೇ ಸಾಲಿಗೆ ಮಾತ್ರ ಜಂಟಿ ಬ್ಯಾಂಕ್ ಖಾತೆ ತೆಗೆದು ಬಿಡುಗಡೆಯಾದ ಅನುದಾನವನ್ನು ಮಾರ್ಗಸೂಚಿಯನ್ವಯ ಜಂಟಿಯಾಗಿ ನಿರ್ವಹಿಸತಕ್ಕದ್ದು.

ಈ ಯೋಜನೆಯ ಉದ್ದೇಶಕ್ಕಾಗಿ ನಿಗದಿಪಡಿಸಿದ ಮೊತ್ತವನ್ನು ಬಳಸಿಕೊಂಡ ನಂತರ ಈ ಜಂಟಿ ಖಾತೆಯನ್ನು ಮುಕ್ತಾಯಗೊಳಿಸುವುದು. ಈ ಖಾತೆಯಲ್ಲಿ ಸ್ವೀಕೃತವಾದ ಬಡ್ಡಿಯ ಮೊತ್ತವನ್ನು "0049 -04-800-6-01" ರಡಿ ಜಮೆ ಮಾಡುವುದು. ಹಾಗೂ 2022-23 ನೇ ಸಾಲಿನಲ್ಲಿ ಸದರಿ ಯೋಜನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ ಆಇ 37 ಟಿ ಎ ಆರ್ 2021, ದಿನಾಂಕ 26.07.2021 ರಲ್ಲಿ ತಿಳಿಸಿರುವಂತೆ DBT Paltform ಮೂಲಕ ಅನುಷ್ಠಾನಗೊಳಿಸುವುದು.

### ಸಾಮಾಜಿಕ ಸಂಸ್ಥೆಗಳ ಆಯ್ಕೆ:

- ಜಿಲ್ಲೆಗಳಲ್ಲಿ ಸಾವಯವ ಕೃಷಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ನೋಂದಾಯಿತ ಸಾಮಾಜಿಕ ಸಂಸ್ಥೆಗಳಿಂದ ಪತ್ರಿಕಾ ಪ್ರಕಟಣೆ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು .

- ಆಸಕ್ತ ಸಾಮಾಜಿಕ ಸಂಸ್ಥೆಗಳು ಅರ್ಜಿ/ಪ್ರಸ್ತಾವನೆಗಳನ್ನು ಆ ಜಿಲ್ಲಾ ವ್ಯಾಪ್ತಿಯ ಕೃವಿವಿ/ ಕೃ & ತೋ/ ತೋಟಗಾರಿಕೆ ವಿ.ವಿ ಗಳ/ ಸ್ಥಳೀಯ ಕೆ.ವಿ.ಕೆ ಗಳ ಶಿಫಾರಸ್ಸಿನೊಂದಿಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.
- ಸಲ್ಲಿಕೆಯಾದ ಅರ್ಜಿಗಳನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಜಿಲ್ಲಾ ಸಾವಯವ ಕೃಷಿ ಚಾಲನಾ ಸಮಿತಿಯು ಪರಿಶೀಲಿಸುವುದು.
- ಜಿಲ್ಲೆಗೆ ಅರ್ಹವಿರುವ ಸಂಸ್ಥೆಯನ್ನು ಶಿಫಾರಸ್ಸಿನೊಂದಿಗೆ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಅನುಮೋದನೆಗೆ ಕೇಂದ್ರ ಕಚೇರಿಗೆ ಸಲ್ಲಿಸುವುದು.
- ಯೋಜನಾ ಅನುಷ್ಠಾನವನ್ನು ಆಯ್ಕೆಯಾದ ಸಾಮಾಜಿಕ ಸಂಸ್ಥೆಗಳು ಆ ಜಿಲ್ಲಾ ವ್ಯಾಪ್ತಿಯ ಕೃವಿವಿ/ಕೃ & ತೋ/ ತೋಟಗಾರಿಕೆ ವಿ.ವಿ ಗಳ/ಪಶು ಸಂಗೋಪನ ವಿ.ವಿ/ ಸ್ಥಳೀಯ ಕೆ.ವಿ.ಕೆ ಗಳ ಸಹಯೋಗದೊಂದಿಗೆ ಕೈಗೊಳ್ಳುವುದು.
- ಪ್ರತಿ ಜಿಲ್ಲೆಗೆ ಒಂದರಂತೆ ಅರ್ಹ ಸಾಮೂಹಿಕ ಸಂಸ್ಥೆಯನ್ನು ಆಯ್ಕೆ ಮಾಡುವುದು.

## ಅರ್ಜಿ ಸಲ್ಲಿಸಲು ಅರ್ಹತೆಃ

- ನೋಂದಾಯಿತ ಸಾಮಾಜಿಕ ಸಂಸ್ಥೆಗಳು ರಾಜ್ಯದಲ್ಲಿ **ಕಳೆದ ಹತ್ತು ವರ್ಷಗಳಿಂದ** ಸಾವಯವ ಕೃಷಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರಬೇಕು.
- ಸಾವಯವ ಕೃಷಿ ಸಂಬಂಧಿತ ತರಬೇತಿ/ ಕಾರ್ಯಾಗಾರಗಳನ್ನು ಆಯೋಜಿಸಲು ಅವಶ್ಯಕವಾದ **ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು**.
- ಈ ಸಂಸ್ಥೆಗಳು **ಕನಿಷ್ಠ 10ಹೆ. ವ್ಯವಸಾಯ ಯೋಗ್ಯ ಪ್ರದೇಶವನ್ನು** ಹೊಂದಿರಬೇಕು.
- ಹಾಲಿ ಸಂಸ್ಥೆಗಳಲ್ಲಿ **ಗೋಶಾಲೆಗಳನ್ನು** ನಿರ್ವಹಿಸುತ್ತಿರಬೇಕು.
- ಆ ವ್ಯಾಪ್ತಿಯ ಕೃಷಿ ವಿಶ್ವವಿದ್ಯಾನಿಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಹಾಗೂ ಈ ಹಿಂದೆ ಸರ್ಕಾರದ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮದಡಿ ಕಾರ್ಯನಿರ್ವಹಿಸಿರುವ ಸಂಸ್ಥೆಗಳಿಗೆ ಆದ್ಯತೆ ನೀಡಲಾಗುವುದು.

  **ಷರಾ:-ಮೇಲೆ ತಿಳಿಸಿರುವ ಎಲ್ಲಾ ಅರ್ಹತಾ ಅಂಶಗಳಿಗೆ ಸಂಬಂಧಿತ ದಾಖಲಾತಿಗಳನ್ನು ಅರ್ಜಿಯೊಂದಿಗೆ ಸಲ್ಲಿಸುವುದು**

## ಆಯ್ಕೆಯಾಗುವ ಸಾಮಾಜಿಕ ಸಂಸ್ಥೆಗಳ ಅನುಷ್ಠಾನ ಜವಾಬ್ದಾರಿಃ

### 1. ಸಾವಯವ ಕೃಷಿ ತರಬೇತಿ, ಸಾಮರ್ಥ್ಯವೃದ್ಧಿ ಮತ್ತು ಪ್ರಚಾರ:

#### 1a. ಉತ್ಪಾದನೆ ಆಧಾರಿತ ತರಬೇತಿ ಮತ್ತು ಸಾಮರ್ಥ್ಯಾಭಿವೃದ್ಧಿ

- ಪ್ರತಿ ತಾಲ್ಲೂಕಿಗೆ ಪ್ರಾತ್ಯಕ್ಷಿಕೆಯೊಂದಿಗೆ **ಎರಡು ದಿನಗಳ** ತರಬೇತಿ, ಒಂದು ತರಬೇತಿ ತಂಡದಲ್ಲಿ **ಗರಿಷ್ಠ 150 ರೈತ** ತರಬೇತಿದಾರರಂತೆ ಪ್ರತಿ ತಾಲೂಕಿನಲ್ಲಿ **ಆಯ್ಕೆಯಾದ ಎಲ್ಲಾ 750 ಜನ** ರೈತರಿಗೂ ತರಬೇತಿ ನೀಡುವುದು ಒಟ್ಟು **5** ತರಬೇತಿಗಳು.
- ಪ್ರತಿ ರೈತರಿಗೆ ಪ್ರತಿ ದಿನಕ್ಕೆ ರೂ.**500/-**ರಂತೆ ತರಬೇತಿ ವೆಚ್ಚ ನೀಡಲಾಗುವುದು. ಇದರಲ್ಲಿ ತರಬೇತಿಗೆ ಹಾಜರಾಗುವ ರೈತರಿಗೆ ಬಂದು ಹೋಗುವ ಪ್ರಯಾಣ ವೆಚ್ಚ, ತರಬೇತಿಗೆ ಹಾಜರಾಗುವ ರೈತರಿಗೆ ಕಾಫಿ/ಟೀ, ತಿಂಡಿ ಮತ್ತು ಊಟ, ತರಬೇತಿ ಸಾಮಗ್ರಿಗಳು, ಸಾಧನಗಳು, ಲೇಖನ ಸಾಮಗ್ರಿ/ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ, ತಾಂತ್ರಿಕ ಮಾಹಿತಿಯ ಜೆರಾಕ್ಸ್ ಮತ್ತು ತರಬೇತಿ ಆಯೋಜನೆಗೆ ಪೂರಕವಾದ ಇನ್ನಾವುದೇ ವೆಚ್ಚಗಳನ್ನು ಈ ಅನುದಾನದಲ್ಲಿ ಭರಿಸುವುದು.
- ತರಬೇತಿ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಆಯ್ಕೆಯಾದ ಸಾಮಾಜಿಕ ಸಂಸ್ಥೆಗಳಲ್ಲಿಯೇ ಆಯೋಜಿಸುವುದು. ತರಬೇತಿಗಳನ್ನು ಸ್ಥಳೀಯ ಕೃಷಿ ವಿಶ್ವವಿದ್ಯಾನಿಲಯ/ಕೆ.ವಿ.ಕೆ.ಗಳ ಸಹಯೋಗದೊಂದಿಗೆ ಆಯೋಜಿಸುವುದು.

- ಪ್ರತಿ ತರಬೇತಿಗೆ ಹೊರಗಿನ ಒಬ್ಬರು ವಿಷಯ ತಜ್ಞರನ್ನು ಆಹ್ವಾನಿಸುವುದು. ವಿಷಯ ತಜ್ಞರು: ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿ, ವಿವಿಧ ಅಭಿವೃದ್ಧಿ ಇಲಾಖೆಗಳ ವಿಷಯತಜ್ಞ ಅಧಿಕಾರಿಗಳು, ಅನುಭವಿ ಸಾವಯವ ಕೃಷಿಕರು, ಸರ್ಕಾರೇತರ ಸಂಸ್ಥೆಗಳ ವಿಷಯ ತಜ್ಞರು ಇತ್ಯಾದಿ
- ತರಬೇತಿಯಲ್ಲಿ ಸಾಕಷ್ಟು ಸಂಖ್ಯೆಯ ಮಹಿಳಾ ರೈತರುಗಳು ಪಾಲ್ಗೊಳ್ಳುವುದು ಅವಶ್ಯಕ.
- ಪ್ರಗತಿಯ ವರದಿಯಲ್ಲಿ ಏರ್ಪಡಿಸಲಾದ ತರಬೇತಿ ವಿಷಯಗಳು, ಭಾಗವಹಿಸಿದ್ದ ರೈತರುಗಳ ಸಂಖ್ಯೆ, ಭಾಗವಹಿಸಿದ್ದ ವಿಷಯ ತಜ್ಞರು, ಏರ್ಪಡಿಸಲಾಗಿದ್ದ ಪ್ರಾತ್ಯಕ್ಷಿಕೆ ಈ ಎಲ್ಲಾ ವಿವರಗಳನ್ನು ಆಯಾ ಸಾಮಾಜಿಕ ಸಂಘ ಸಂಸ್ಥೆಗಳು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು.

**ತರಬೇತಿಯ ವಿಷಯಗಳು:**

1. ಸಾವಯವ ಕೃಷಿ ಪರಿಕಲ್ಪನೆ, ಸಾವಯವ ಕೃಷಿ ಏಕೆ? ತತ್ವಗಳು ಮತ್ತು ಮುಖ್ಯ ಅವಶ್ಯಕತೆಗಳು ಇತ್ಯಾದಿ.
2. ಎರೆಹುಳು ಗೊಬ್ಬರ ತಯಾರಿಕೆ ಮತ್ತು ವಿವಿಧ ಪದ್ಧತಿಯಲ್ಲಿ ಕಾಂಪೋಸ್ಟ್ ತಯಾರಿಕೆ – ಪ್ರಾತ್ಯಕ್ಷಿಕೆಯೊಂದಿಗೆ.
3. ಸಾವಯವ ಕೃಷಿಯಲ್ಲಿ ಹಸಿರೆಲೆ ಗೊಬ್ಬರಗಳ ಬಳಕೆ, ಸಂಪದ್ಭರಿತ ಕಾಂಪೋಸ್ಟ್ ಎಣ್ಣೆ ಹಿಂಡಿಗಳ ಬಳಕೆ. ಜೈವಿಕ ಗೊಬ್ಬರಗಳ ಬಳಕೆ, ಜೀವ ಚೈತನ್ಯ ತಯಾರಿಕೆಗಳು, ದ್ರವರೂಪದ ಗೊಬ್ಬರಗಳು, ಪಂಚಗವ್ಯ ತಯಾರಿಕೆ ಇತ್ಯಾದಿ – ಪ್ರಾತ್ಯಕ್ಷಿಕೆಯೊಂದಿಗೆ.
4. ಸಾವಯವ ಕೃಷಿಯಲ್ಲಿ ಕೀಟಗಳ ನಿರ್ವಹಣೆ – ಜೈವಿಕ ಪೀಡೆನಾಶಕಗಳು, ಪರಭಕ್ಷಕ ಮತ್ತು ಪರತಂತ್ರ ಜೀವಿಗಳು. ಸಾವಯವ ಕೃಷಿಯಲ್ಲಿ ರೋಗ ನಿರ್ವಹಣೆ.
5. ಬೆಳೆ ಪದ್ಧತಿ, ಬೆಳೆ ಪರಿವರ್ತನೆ, ಬಹುಬೆಳೆ, ಅಂತರಬೆಳೆ, ಬಹು ಅಂತಸ್ತು ಬೆಳೆ ಪದ್ಧತಿಗಳು.
6. ಸಾವಯವ ಕೃಷಿಯಲ್ಲಿ ಪಶು ಪಾಲನೆಯ ಸಮ್ಮಿಲನ- ಸ್ಥಳದಲ್ಲಿಯೇ ಮೇವಿನ ಉತ್ಪಾದನೆ ಸೇರಿದಂತೆ ಕೃಷಿ ಉಪಕಸುಬುಗಳು – ಕುರಿ, ಕೋಳಿ, ಹಂದಿ, ಮೊಲ ಸಾಕಾಣಿಕೆ, ಜೇನು, ಮೀನು ಮತ್ತು ಇತರೆ ಉಪಕಸುಬುಗಳು.
7. ಮಣ್ಣು ಮತ್ತು ನೀರಿನ ಸಂರಕ್ಷಣೆ ಪದ್ಧತಿಗಳು ಮತ್ತು ಮಳೆ ನೀರು ಕೊಯ್ಲು, ಪುನರ್ ನವೀಕರಿಸುವ ಶಕ್ತಿ ಮೂಲಗಳು – ಜೈವಿಕ ಅನಿಲ ಸ್ಥಾವರ, ಸೌರಶಕ್ತಿ, ಹೊಗೆ ರಹಿತ ಒಲೆ ಇತ್ಯಾದಿ.
8. ಆಂತರಿಕ ನಿಯಂತ್ರಣ ವ್ಯವಸ್ಥೆ (ICS), tracenet ಅಳವಡಿಕೆ ಮತ್ತು ಸಾವಯವ ಕ್ಷೇತ್ರಗಳ ಗುಂಪು ಪ್ರಮಾಣೀಕರಣ- KSSOCA ಸಂಸ್ಥೆಯ ಮುಖಾಂತರ.

ಸ್ಥಳೀಯ ಅವಶ್ಯಕತೆ ಆಧಾರಿಸಿ ಸೂಕ್ತ ಮಾರ್ಪಾಡು ಮಾಡಿಕೊಳ್ಳಬಹುದಾಗಿದೆ. ಸಾವಯವ ಕೃಷಿಗೆ ಪೂರಕವಾಗಿ ಇನ್ನಾವುದೇ ವಿಷಯಗಳನ್ನು ತರಬೇತಿಯಲ್ಲಿ ಅಡಕಗೊಳಿಸಿಕೊಳ್ಳಬಹುದಾಗಿದೆ.

### 1b. ಮಾರುಕಟ್ಟೆ ಆಧಾರಿತ ತರಬೇತಿ ಮತ್ತು ಸಾಮರ್ಥ್ಯವೃದ್ಧಿ (ಯೋಜನೆ ಅನುಷ್ಠಾನದ ಎರಡನೇ ಸಾಲಿನಲ್ಲಿ)

- ಸಾವಯವ ಉತ್ಪನ್ನಗಳ ಮಾರುಕಟ್ಟೆಗೆ ಹೆಚ್ಚಿನ ಒತ್ತು ನೀಡಬೇಕಾಗಿರುವ ಹಿನ್ನೆಲೆಯಲ್ಲಿ ಯೋಜನಾ ಅನುಷ್ಠಾನದ 2ನೇ ಅಥವಾ 3ನೇ ವರ್ಷದಲ್ಲಿ ಮಾರುಕಟ್ಟೆ ಆಧಾರಿತ ತರಬೇತಿ ಏರ್ಪಡಿಸುವುದು.

- ಕೊಯ್ಲಿನೋತ್ತರ ತಂತ್ರಜ್ಞಾನ, ಮೌಲ್ಯವರ್ಧನೆ, ಸಂಸ್ಕರಣೆ, ಗ್ರೇಡಿಂಗ್, ಕ್ಲೀನಿಂಗ್, ಪ್ಯಾಕಿಂಗ್, ದಾಸ್ತಾನು, ಸಾಗಾಣಿಕೆ, ನೇರ ಮಾರುಕಟ್ಟೆ ಇತ್ಯಾದಿಗಳ ಬಗ್ಗೆ ತರಬೇತಿ ಏರ್ಪಡಿಸುವುದು.
- ಪ್ರತಿ ಜಿಲ್ಲೆಯಲ್ಲಿ 75 ಶಿಕ್ಷಣಾರ್ಥಿಗಳ ತಂಡದಂತೆ ಒಂದು ದಿನದ ತರಬೇತಿಯನ್ನು ಆಯೋಜಿಸುವುದು.
- ಪ್ರತಿ ಶಿಕ್ಷಣಾರ್ಥಿಗೆ ರೂ.500/-ರಂತೆ ಅನುದಾನ ಒದಗಿಸಲಾಗುವುದು. ತರಬೇತಿಗೆ ಹಾಜರಾಗುವ ಶಿಕ್ಷಣಾರ್ಥಿಗಳಿಗೆ ಕಾಫಿ/ಟೀ ತಿಂಡಿ ಮತ್ತು ಊಟ, ತರಬೇತಿ ಸಾಮಗ್ರಿಗಳು, ಸಾಧನಗಳು, ಲೇಖನ ಸಾಮಗ್ರಿ/ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ, ಶಿಕ್ಷಣಾರ್ಥಿಗಳ ಪ್ರಯಾಣ ವೆಚ್ಚ ತಾಂತ್ರಿಕ ಮಾಹಿತಿಯ ಜೆರಾಕ್ಸ್ ಮತ್ತು ತರಬೇತಿ ಆಯೋಜನೆಗೆ ಪೂರಕವಾದ ಇನ್ನಾವುದೇ ವೆಚ್ಚಗಳನ್ನು ಈ ಅನುದಾನದಲ್ಲಿ ಭರಿಸುವುದು.
- ತಮ್ಮ ತಾಲ್ಲೂಕಿನ ಸಾವಯವ ಬೆಳೆಗಳನ್ನು ಗಮನದಲ್ಲಿಟ್ಟುಕೊಂಡು ಮೇಲೆ ತಿಳಿಸಿರುವ ವಿಷಯಗಳ ಬಗ್ಗೆ ಪರಿಣಿತಿ ಹೊಂದಿದ ಸಂಪನ್ಮೂಲ ವ್ಯಕ್ತಿಗಳನ್ನು/ಸಂಸ್ಥೆಗಳು, ಕೃವಿವಿ, ಕೆವಿಕೆಗಳನ್ನು ಸಂಪರ್ಕಿಸಿ ತರಬೇತಿ ಆಯೋಜನೆಗೆ ಕ್ರಮ ಕೈಗೊಳ್ಳುವುದು.

## 2. ಅಧ್ಯಯನ ಪ್ರವಾಸ

### 2a. ಉತ್ಪಾದನಾ ತಾಂತ್ರಿಕತೆ ಅಧ್ಯಯನಕ್ಕಾಗಿ ಜಿಲ್ಲಾ ಪ್ರವಾಸ- ತಾಲ್ಲೂಕಿಗೆ ಒಂದರಂತೆ ಒಂದು ದಿನದ ಪ್ರವಾಸ 50 ಜನ (25 ರೈತರು/25 ರೈತ ಮಹಿಳೆಯರು) (ಅನುದಾನ ರೂ.25000/-)

- ಈ ಕಾರ್ಯಕ್ರಮದ ಉದ್ದೇಶವು ಯೋಜನಾ ಪ್ರದೇಶದ ರೈತರಿಗೆ ಸಾವಯವ ಕೃಷಿ ಯಶಸ್ಸಿನ ಬಗ್ಗೆ ಭರವಸೆ ಮತ್ತು ಮನವರಿಕೆ ಮಾಡಿಕೊಡುವುದಾಗಿದೆ.
- ಭೇಟಿ ನೀಡಬಹುದಾದ ಸ್ಥಳಗಳು- ಜಿಲ್ಲಾ ಮಟ್ಟ/ತಾಲ್ಲೂಕು ಮಟ್ಟದ ಯಶಸ್ವಿ ಸಾವಯವ ಗ್ರಾಮ/ ಸ್ಥಳಗಳು, ಕೃಷಿ ವಿಶ್ವವಿದ್ಯಾನಿಲಯಗಳ ಮಾದರಿ ಸಾವಯವ ಕ್ಷೇತ್ರಗಳು, ಕೃಷಿ ಇಲಾಖೆ/ ತೋಟಗಾರಿಕೆ ಇಲಾಖೆಗಳ ಮಾದರಿ ಸಾವಯವ ಕ್ಷೇತ್ರಗಳು, ಸಾವಯವ ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿರುವ ರೈತರ ಕ್ಷೇತ್ರಗಳು, ಸರ್ಕಾರೇತರ ಸಂಸ್ಥೆಗಳು ಅಭಿವೃದ್ಧಿ ಪಡಿಸಿರುವ ಸಾವಯವ ಕೃಷಿ ಕ್ಷೇತ್ರಗಳು ಇತ್ಯಾದಿ.

### 2b. ಸಾವಯವ ಉತ್ಪನ್ನಗಳ ಮೌಲ್ಯವರ್ಧನೆ-ಸಂಸ್ಕರಣೆ-ಮಾರುಕಟ್ಟೆ ಘಟಕಗಳಿಗೆ ಅಧ್ಯಯನ ಪ್ರವಾಸ (50 ಜನರ ಪ್ರತಿ ತಂಡಕ್ಕೆ ಅನುದಾನ ರೂ.20000/-)

- ಸಾವಯವ ಉತ್ಪನ್ನಗಳ ಮಾರುಕಟ್ಟೆಗೆ ಹೆಚ್ಚಿನ ಒತ್ತು ನೀಡಬೇಕಾಗಿರುವ ಹಿನ್ನಲೆಯಲ್ಲಿ ಯೋಜನಾ ಅನುಷ್ಠಾನದ 2-3ನೇ ವರ್ಷದಲ್ಲಿ ಯೊಜನಾ ಪ್ರದೇಶದ ರೈತರಿಗೆ ಸಾವಯವ ಉತ್ಪನ್ನಗಳ ಮೌಲ್ಯವರ್ಧನೆ- ಸಂಸ್ಕರಣೆ- ಮಾರುಕಟ್ಟೆ ಘಟಕಗಳಿಗೆ ಅಧ್ಯಯನ ಪ್ರವಾಸ ಏರ್ಪಡಿಸುವುದು.
- ಭೇಟಿ ನೀಡಬಹುದಾದ ಸ್ಥಳಗಳು – ಹತ್ತಿರದ ಫುಡ್ ಪಾರ್ಕ್ ಗಳು, ಕೃ.ವಿ.ವಿಗಳ ಸಂಸ್ಕರಣಾ ಘಟಕಗಳು, ಇನ್ನಾವುದೇ ಮೌಲ್ಯವರ್ಧನೆ/ ಸಂಸ್ಕರಣಾ/ಪ್ಯಾಕಿಂಗ್ ಘಟಕಗಳು.

**ಷರಾ:-ಜಿಲ್ಲಾ ಮಟ್ಟದಲ್ಲಿ ಗುರುತಿಸಲಾಗುವ ಸಾಮಾಜಿಕ ಸಂಸ್ಥೆಗಳ ಮುಖಾಂತರ ಆಯೋಜಿಸಬೇಕಾಗಿರುವ ಸಾವಯವ ತರಬೇತಿ ಮತ್ತು ಅಧ್ಯಯನ ಪ್ರವಾಸವನ್ನು ಕೈಗೊಳ್ಳಲು ಸಾಮಾಜಿಕ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯ ಇಲ್ಲದಿದ್ದಲ್ಲಿ ಈ ಘಟಕಗಳನ್ನು ಆಯಾ ಜಿಲ್ಲೆಯ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ಆ ವ್ಯಾಪ್ತಿಯ**

**ಕೃವಿವಿ/ಕೃತೋವಿವಿ/ತೋ.ವಿ.ವಿ ಗಳ ಸಹಯೋಗದೊಂದಿಗೆ ಆಯೋಜಿಸುವುದು. ಸಾವಯವ ಕೃಷಿಯಲ್ಲಿ ಪರಿಣಿತಿ ಹೊಂದಿರುವ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಆಯೋಜಿಸುವುದು.**

## 3. ಸಾವಯವ ಕೃಷಿಯ ಪ್ರಚಾರ – ಪ್ರಚಾರ, ಪ್ರಸಾರ, ಪ್ರಕಟಣೆ, ವಸ್ತು ಪ್ರದರ್ಶನ, ಮೇಳ, ಮುದ್ರಣ/ದಾಖಲಾತಿ ಇತ್ಯಾದಿ (ರೂ.2.00ಲಕ್ಷ).

- ಈ ಕಾರ್ಯಕ್ರಮದ ಉದ್ದೇಶವು ಯೋಜನಾ ಪ್ರದೇಶದ ರೈತರಿಗೆ, ಸುತ್ತಮುತ್ತಲಿನ ಗ್ರಾಮಗಳ ರೈತರಿಗೆ ಸಾವಯವ ಕೃಷಿ ಬಗ್ಗೆ ಅರಿವು ಮೂಡಿಸುವುದಾಗಿದೆ.
- ಕರಪತ್ರ, ಭಿತ್ತಿ ಪತ್ರ ಇತ್ಯಾದಿಗಳಿಗೆ ತಾಂತ್ರಿಕ ಮಾಹಿತಿಯನ್ನು ಕೃಷಿ ವಿಶ್ವವಿದ್ಯಾನಿಲಯಗಳಿಂದ, ಸಾವಯವ ಕೃಷಿ ಬಗ್ಗೆ ಈಗಾಗಲೇ ಪ್ರಕಟಿತವಾಗಿರುವ ಪುಸ್ತಕಗಳಿಂದ, ಇತರೆ ಪ್ರಕಟಣೆಗಳಿಂದ ಪಡೆಯಬಹುದಾಗಿದೆ.
- ಈ ಕಾರ್ಯಕ್ರಮದಡಿಯಲ್ಲಿ ಈಗಾಗಲೇ ಅನುಷ್ಠಾನಗೊಂಡಿರುವ ಜಿಲ್ಲಾ/ ತಾಲ್ಲೂಕು ಮಟ್ಟದ ಯಶಸ್ವಿ ಸಾವಯವ ಕೃಷಿಕರ ಯಶೋಗಾಥೆಯನ್ನು, ಸ್ಥಳೀಯ ತಾಂತ್ರಿಕತೆಯನ್ನು ಮುದ್ರಿಸಿ ಹಂಚಬಹುದಾಗಿದೆ.
- ವಿವಿಧ ರೀತಿಯ ಪ್ರಚಾರ, ಪ್ರಸಾರ, ಪ್ರಕಟಣೆ, ಮುದ್ರಣ ಇನ್ನಿತರೆ ಯಾವುದೇ ಸಂಬಂಧಿತ.
- ಯೋಜನಾ ಪ್ರದೇಶದ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿನ ಸರ್ಕಾರಿ ಕಟ್ಟಡಗಳ ಹಾಗೂ ಖಾಸಗಿ ಕಟ್ಟಡಗಳ (ಮಾಲೀಕರ ಅನುಮತಿಯೊಂದಿಗೆ) ಮೇಲೆ ಸಾವಯವ ಕೃಷಿ ತತ್ವ/ಪದ್ಧತಿಗಳು/ಸಾವಯವ ಕೃಷಿಯಿಂದಾಗುವ ಲಾಭಗಳು/ದೊರೆಯುವ ಸೌಲಭ್ಯಗಳು ಮುಂತಾದ ಮಾಹಿತಿಯನ್ನು ಗೋಡೆ ಬರಹಗಳ ಮೂಲಕ ಪ್ರಚಾರ ಕೈಗೊಳ್ಳುವುದು. ಹಾಗೂ ಇಲಾಖೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
- ಯೋಜನೆಯ ಅನುಷ್ಠಾನದ ಗ್ರಾಮದಲ್ಲಿ ಅಥವಾ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಂತೆ, ಧಾರ್ಮಿಕ ಕಾರ್ಯಕ್ರಮ ಹೀಗೆ ಜನರು ಸೇರುವ ಸಂದರ್ಭಗಳಲ್ಲಿ ಸಾವಯವ ಕೃಷಿಯ ತತ್ವಗಳು, ಪದ್ಧತಿಗಳು, ಪರಿಕರಗಳು, ಉತ್ಪನ್ನಗಳು ಇವುಗಳನ್ನೊಳಗೊಂಡ ಸಣ್ಣ ಪ್ರಮಾಣದ ವಸ್ತು ಪ್ರದರ್ಶನವನ್ನು ಏರ್ಪಡಿಸುವುದು.

## 4. ಮಾದರಿ ಸಾವಯವ ಕ್ಷೇತ್ರ ಸ್ಥಾಪನೆ ಮತ್ತು ಕ್ಷೇತ್ರೋತ್ಸವ (ರೂ.3,00,000/-)

- ಸಾಮಾಜಿಕ ಸಂಸ್ಥೆಗಳಲ್ಲಿ ಲಭ್ಯವಿರುವ 10ಹೆ. ಪ್ರದೇಶದಲ್ಲಿ ಸಾವಯವ ಕೃಷಿ ತತ್ವ ಹಾಗೂ ಪರಿಕಲ್ಪನೆಗಳನ್ನೊಳಗೊಂಡ ಮಾದರಿ ಸಾವಯವ ಕ್ಷೇತ್ರವನ್ನು ಆ ವ್ಯಾಪ್ತಿಯ ಕೃವಿವಿಗಳ ಸಹಯೋಗದೊಂದಿಗೆ ಸ್ಥಾಪಿಸುವುದು.
- ಈ ಕಾರ್ಯಕ್ರಮದ ಉದ್ದೇಶವು ಮಾದರಿ ಸಾವಯವ ಕ್ಷೇತ್ರದ ಬಗ್ಗೆ ಸುತ್ತಮುತ್ತಲಿನ ಗ್ರಾಮಗಳ ರೈತರಿಗೆ, ತಾಲ್ಲೂಕಿನ ಇತರೆ ಆಸಕ್ತ ರೈತರಿಗೆ, ಕೃಷಿ ಇಲಾಖೆ ಮತ್ತು ಇತರೆ ಅಬಿವೃದ್ಧಿ ಇಲಾಖೆಗಳ ಅದಿಕಾರಿಗಳಿಗೆ, ಚುನಾಯಿತ ಪ್ರತಿನಿದಿಗಳಿಗೆ ಸಾವಯವ ಕೃಷಿ ಯಶಸ್ಸಿನ ಬಗ್ಗೆ ಅರಿವು ಮೂಡಿಸುವುದಾಗಿದೆ.
- ಮಾದರಿ ಕ್ಷೇತ್ರದಲ್ಲಿ ಬಹುಪಾಲು ಬೆಳೆಗಳು ಫಸಲು ನೀಡುವ/ಕಟಾವು ಹಂತದಲ್ಲಿ ಕ್ಷೇತ್ರೋತ್ಸವವನ್ನು ಏರ್ಪಡಿಸುವುದು.

- ಕ್ಷೇತ್ರೋತ್ಸವಕ್ಕೆ ಪ್ರಸಾರ/ಮುದ್ರಣ ಮಾಧ್ಯಮದ ಮೂಲಕ ವ್ಯಾಪಕ ಪ್ರಚಾರ ನೀಡುವುದು.
- ಹತ್ತಿರದ ಸಂಶೋಧನಾ ಕೇಂದ್ರದ ವಿಜ್ಞಾನಿಗಳನ್ನು, ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳನ್ನು, ಚುನಾಯಿತ ಪ್ರತಿನಿಧಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸುವುದು
- ಕ್ಷೇತ್ರದಲ್ಲಿ ಬೆಳೆ ಪದ್ಧತಿಗಳ ಬಗ್ಗೆ, ತಳಿಗಳ ಬಗ್ಗೆ, ಉಪಯೋಗಿಸಲಾದ ಸಾವಯವ ಪರಿಕರಗಳ ಬಗ್ಗೆ, ಅನುಸರಿಸಲಾದ ಸಸ್ಯ ಸಂರಕ್ಷಣಾ ಕ್ರಮಗಳ ಬಗ್ಗೆ ಫಲಕಗಳನ್ನು ಬರೆಯಿಸಿ ವೀಕ್ಷಕರ ಗಮನ ಸೆಳೆಯುವುದು.

## 5. ನಾಟಿ ತಳಿಗಳ ಸಮುದಾಯ ಬೀಜ ಬ್ಯಾಂಕ್ ಸ್ಥಾಪನೆ:

ಕಣ್ಮರೆಯಾಗುತ್ತಿರುವ ಮತ್ತು ಆಯಾ ಸ್ಥಳೀಯ ಪ್ರದೇಶಕ್ಕೆ ಸೂಕ್ತವಾದ ದೇಸಿ ತಳಿಗಳನ್ನು ಸಂಗ್ರಹಿಸಿ ಅಭಿವೃದ್ಧಿಪಡಿಸಿ ಸಂರಕ್ಷಿಸುವ ಉದ್ದೇಶದಿಂದ ಸಮುದಾಯ ಬೀಜ ಬ್ಯಾಂಕ್‌ಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ. ರೈತರಲ್ಲಿ ಬೀಜ ಸ್ವಾವಲಂಬನೆ ಬೆಳೆಸುವುದು ಈ ಕಾರ್ಯಕ್ರಮದ ಮತ್ತೊಂದು ಉದ್ದೇಶ. ಈ ನಿಟ್ಟಿನಲ್ಲಿ ಬೀಜ ಬ್ಯಾಂಕ್ ಸ್ಥಾಪನೆಗಾಗಿ ಅನುದಾನ ಒದಗಿಸಲಾಗಿದ್ದು, ಸಮುದಾಯ ಬೀಜ ಬ್ಯಾಂಕ್ ಸ್ಥಾಪನೆಯಲ್ಲಿ ಈ ಕೆಳಗೆ ತಿಳಿಸಿರುವಂತೆ ವಿವಿಧ ಘಟಕಗಳ ವೆಚ್ಚ ಭರಿಸಲು ಅವಕಾಶ ಕಲ್ಪಿಸಲಾಗಿದೆ.

| ಘಟಕ | ಪ್ರಮಾಣ | ಅನುದಾನ (ರೂ.ಗಳಲ್ಲಿ) |
|---|---|---|
| ಸಮುದಾಯ ಬೀಜ ಬ್ಯಾಂಕ್ | | |
| ದೇಸಿ ಬೀಜಗಳನ್ನು ಶೇಖರಣೆ ಮಾಡಲು ವಾಡೆ ಗಳು | ಸಂಖ್ಯೆ.15 | 20,000/- |
| ದೇಸಿ ಬೀಜಗಳ ಮಾದರಿ ಸಂಗ್ರಹಿಸಲು ಗಾಜಿನ ಬಾಟಲ್ ಗಳು | ಸಂಖ್ಯೆ.50 | |
| ಬಿತ್ತನೆ ಬೀಜಗಳ ಸಂಗ್ರಹಣೆಗೆ ಮಣ್ಣಿನ ಮಡಿಕೆಗಳು | ಸಂಖ್ಯೆ.10 | |
| ಬೀಜ ಬ್ಯಾಂಕ್ ಕಾರ್ಡ್, ದಾಖಲಾತಿ ಪುಸ್ತಕ, ಬೀಜ ಸಂಗ್ರಹಣಾ ನಮೂನೆ, ಮತ್ತು ಲೇಖನ ಸಾಮಗ್ರಿ | ---- | |
| Racks ಮತ್ತು Shelves ಗಳ ಖರ್ಚು | ---- | |
| ತೂಕದ ಯಂತ್ರ | 1 | |
| ಗೋಡೆ ಬರಹ ಮತ್ತು ಬೀಜ ಬ್ಯಾಂಕ್ ಬೋರ್ಡ್ | ---- | |

**ಷರಾ: ಜಿಲ್ಲಾ ಚಾಲನಾ ಸಮಿತಿಯ ಅನುಮೋದನೆಯೊಂದಿಗೆ ಅವಶ್ಯಕವಿದ್ದಲ್ಲಿ ಅಂತರ ಘಟಕ ಬದಲಾವಣೆಗೆ ಅವಕಾಶ ಕಲ್ಪಿಸಲಾಗಿದೆ.**

## 6. ಸಾವಯವ ಪ್ರಮಾಣೀಕರಣ:

ಸಾಮಾಜಿಕ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸಾವಯವ ಕ್ಷೇತ್ರವನ್ನು KSSOCA ಸಂಸ್ಥೆಯ ಮುಖಾಂತರ ಸಾವಯವ ಪ್ರಮಾಣೀಕರಣಕ್ಕೆ ಒಳಪಡಿಸುವುದು

ಕಡ್ಡಾಯವಾಗಿದ್ದು, ಯೋಜನಾ ಅನುಷ್ಠಾನದ 2ನೇ ವರ್ಷದಲ್ಲಿ ಇದಕ್ಕೆ ತಗುಲುವ ವೆಚ್ಚವನ್ನು KSSOCA ಸಂಸ್ಥೆಗೆ ಒದಗಿಸಲಾಗುವುದು.

**7. ಮಾರಾಟ ಮಳಿಗೆ ಸ್ಥಾಪನೆ:**

ಆಯ್ಕೆಯಾದ ಸಾಮಾಜಿಕ ಸಂಸ್ಥೆಗಳು ತಮ್ಮ ಕೇಂದ್ರ ಸ್ಥಾನಗಳಲ್ಲಿ ಇರುವ ಸೌಲಭ್ಯಗಳನ್ನು ಬಳಸಿಕೊಂಡು ಅಥವಾ ಜಿಲ್ಲಾ /ತಾಲ್ಲೂಕು ಕೇಂದ್ರಗಳಲ್ಲಿ ತಮ್ಮ ಸಂಸ್ಥೆಯ ಅಧೀನದಲ್ಲಿರುವ ಸ್ಥಳಾವಕಾಶವನ್ನು ಬಳಸಿಕೊಂಡು ಅಥವಾ ಸರ್ಕಾರಿ ಕಛೇರಿಗಳಲ್ಲಿ ಸ್ಥಳಾವಕಾಶ ಪಡೆದುಕೊಂಡು ಜಿಲ್ಲೆಗೊಂದರಂತೆ ಕನಿಷ್ಠ10X10 ಚ.ಅಡಿ ಸಾವಯವ ಉತ್ಪನ್ನಗಳ ಮಾರಾಟ ಮಳಿಗೆಯನ್ನು ಸ್ಥಾಪಿಸುವುದು. ಈ ಮಾರಾಟ ಮಳಿಗೆಗಳಲ್ಲಿ ಆ ವ್ಯಾಪ್ತಿಯ ರೈತರ ಸಾವಯವ ಉತ್ಪನ್ನಗಳ ಜೊತೆಗೆ ಇತರೆ ಸಂಸ್ಥೆಗಳು ಉತ್ಪಾದಿಸುವ ಸಾವಯವ ಉತ್ಪನ್ನಗಳನ್ನು ಒಪ್ಪಂದದ ಮೂಲಕ ಒಡಂಬಡಿಕೆ ಮಾಡಿಕೊಂಡು ಮಾರಾಟ ಮಾಡಲು ಅವಕಾಶವಿರುತ್ತದೆ.

ಯೋಜನಾ ಅನುಷ್ಠಾನದ 2ನೇ ವರ್ಷದಲ್ಲಿ ಇದಕ್ಕಾಗಿ ತಲಾ ರೂ.3.00,000/- ಅನುದಾನ ಒದಗಿಸಲಾಗುವುದು. ಮಾರಾಟ ಮಳಿಗೆಗಳಲ್ಲಿ ಮೂಲಭೂತ ಸೌಕರ್ಯಗಳಾದ ಸೀಲಿಂಗ್ ಯಂತ್ರ, ತೂಕ ಮಾಡುವ ಯಂತ್ರ, ಹೊಲಿಗೆ ಯಂತ್ರ, ಪ್ಯಾಕ್ ಮಾಡುವ ಯಂತ್ರ (Mini) Shelves/Racks/Cupboards (ರೂ.20,000/-ಗಳಿಗೆ ಸೀಮಿತವಾಗುವಂತೆ) ಪ್ಯಾಕಿಂಗ್ ಮಾಡುವ ಸಾಮಗ್ರಿಗಳು, ಕ್ರೇಟ್ ಗಳು, ಲೋಹದ ದಾಸ್ತಾನು ಕಣಜಗಳನ್ನು ಖರೀದಿಸಲು, ಬಿಲ್ ಪುಸ್ತಕಗಳನ್ನು ಮುದ್ರಿಸಲು ಪ್ಯಾಕಿಂಗ್ ಸಾಮಗ್ರಿಗಳನ್ನು ಖರೀದಿಸಲು ಅನುದಾನವನ್ನು ಬಳಸಿಕೊಳ್ಳುವುದು.

**8. ಗೋಶಾಲೆ ಸ್ಥಾಪನೆ/ಗೋಸಂರಕ್ಷಣೆ:**

ಆಯ್ಕೆಯಾದ ಸಾಮಾಜಿಕ ಸಂಸ್ಥೆಗಳು ಕಡ್ಡಾಯವಾಗಿ ಗೋಶಾಲೆಯನ್ನು ಆರಂಭಿಸುವುದು. ಅನುದಾನ ಲಭ್ಯತೆಯ ಆಧಾರದ ಮೇರೆಗೆ ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಮಾರ್ಗಸೂಚಿಯನ್ವಯ ಅನುದಾನವನ್ನು ಒದಗಿಸಲಾಗುವುದು.

**9. ನಮ್ಮ ಹೊಲ ನಮ್ಮ ಕೆರೆ:**

ಆಯ್ಕೆಯಾದ ಎಲ್ಲಾ ಸಾಮಾಜಿಕ ಸಂಸ್ಥೆಗಳು ತಮ್ಮ ಕೃಷಿ ಕ್ಷೇತ್ರದಲ್ಲಿ ನಿಗದಿತ ಅಳತೆಯ ಒಂದು ಕೃಷಿ ಹೊಂಡವನ್ನು ಸೂಕ್ತವಾದ ಜಾಗದಲ್ಲಿ ಅವಶ್ಯವಿರುವ ಪ್ರದೇಶದಲ್ಲಿ ಪಾಲಿಥೀನ್ ಲೈನಿಂಗ್ ನೊಂದಿಗೆ ಕಡ್ಡಾಯವಾಗಿ ನಿರ್ಮಿಸಿಕೊಳ್ಳತಕ್ಕದ್ದು, ಇದಕ್ಕೆ ತಗಲಬಹುದಾದ ವೆಚ್ಚವನ್ನು ಇಲಾಖೆಯ ಮಾರ್ಗಸೂಚಿಯನ್ವಯ ಒದಗಿಸಲಾಗುವುದು.

**ಆ) ಎರಡನೇ ಹಂತ- ತಾಲ್ಲೂಕುಮಟ್ಟ- ಸಾವಯವ ಕೃಷಿಕರ ಸಂಘ/ ಸಾವಯವ ಒಕ್ಕೂಟಗಳ ಮುಖಾಂತರ:**

ಸಾವಯವ ಕೃಷಿಯ ಉತ್ತೇಜನದಲ್ಲಿ ತಾಲ್ಲೂಕುಗಳಲ್ಲಿ ಈಗಾಗಲೇ ತೊಡಗಿರುವ ರಾಜ್ಯದ ಟ್ರಸ್ಟ್ ಅಥವಾ ಸೊಸೈಟಿ ಕಾಯ್ದೆಯಡಿ ನೋಂದಾಯಿತ ಸಾವಯವ ಕೃಷಿಕರ ಸಂಘ/ಸಾವಯವ ಒಕ್ಕೂಟಗಳ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸುವುದು. ಸಾವಯವ ಕೃಷಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅನುಭವ ಹೊಂದಿರುವ ಸ್ಥಳೀಯ ನೋಂದಾಯಿತ ಸಾವಯವ ರೈತರ ಗುಂಪು/ ಸಂಘ/ಒಕ್ಕೂಟಗಳಿಗೆ ಆದ್ಯತೆ ನೀಡಲಾಗುವುದು. ಆಯ್ಕೆಯಾಗುವ ಗುಂಪುಗಳು ತಮ್ಮ ವ್ಯಾಪ್ತಿಯ ಕೃಷಿಕರನ್ನು ಉತ್ತೇಜಿಸುವುದು ಹಾಗೂ ಹೆಚ್ಚಿನ ರೈತರನ್ನು ಸಾವಯವ ಕೃಷಿ ವ್ಯಾಪ್ತಿಗೆ ಒಳಪಡಿಸುವುದು.

**ಅರ್ಜಿ ಸಲ್ಲಿಸಲು ಅರ್ಹತೆಃ**

- ಸಾವಯವ ಕೃಷಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಹಾಗೂ 10 ವರ್ಷಗಳ ಅನುಭವವುಳ್ಳ ಆಯಾ ತಾಲ್ಲೂಕುಗಳ ಟ್ರಸ್ಟ್/ಸೊಸೈಟಿ ಕಾಯಿದೆಯಡಿ ನೋಂದಾಯಿತ ಸಾವಯವ ಕೃಷಿಕರ ಸಂಘ/ಸಾವಯವ ಒಕ್ಕೂಟಗಳು/ಗುಂಪುಗಳಿಂದ ಪತ್ರಿಕಾ ಪ್ರಕಟಣೆ ಮೂಲಕ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರರವರು ಅರ್ಜಿಗಳನ್ನು ಆಹ್ವಾನಿಸುವುದು.
- ಸಲ್ಲಿಕೆಯಾದ ಅರ್ಜಿಗಳನ್ನು ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರರವರು ಪರಿಶೀಲಿಸಿ ತಾಲ್ಲೂಕಿಗೊಂದರಂತೆ ಅರ್ಹ ಅರ್ಜಿಗಳನ್ನು ತಮ್ಮ ಶಿಫಾರಸ್ಸಿನೊಂದಿಗೆ ಆಯಾ ವಿಭಾಗದ ಉಪ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.
- ತಾಲ್ಲೂಕುವಾರು ಶಿಫಾರಸ್ಸು ಮಾಡಿದ ಕ್ರೂಢೀಕೃತ ಅರ್ಜಿಗಳ ಪಟ್ಟಿಯನ್ನು ಆಯಾ ವ್ಯಾಪ್ತಿಯ ಉಪ ಕೃಷಿ ನಿರ್ದೇಶಕರುಗಳ ಕಛೇರಿಯಲ್ಲಿ ಮತ್ತೊಮ್ಮೆ ಪರಿಶೀಲಿಸಿ ತಾಲ್ಲೂಕುವಾರು ಅರ್ಹ ಸಾವಯವ ಕೃಷಿಕರ ಸಂಘ/ಸಾವಯವ ಒಕ್ಕೂಟಗಳು/ ಗುಂಪುಗಳ ಪಟ್ಟಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಜಿಲ್ಲಾ ಸಾವಯವ ಕೃಷಿ ಚಾಲನಾ ಸಮಿತಿಯ ಶಿಫಾರಸ್ಸಿನೊಂದಿಗೆ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಅನುಮೋದನೆಗೆ ಕೇಂದ್ರ ಕಛೇರಿಗೆ ಸಲ್ಲಿಸುವುದು.
- ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಅನುಮೋದಿತ ಸಾವಯವ ಕೃಷಿಕರ ಗುಂಪು/ಒಕ್ಕೂಟಗಳಿಗೆ ಕಾರ್ಯಕ್ರಮ ಅನುಷ್ಠಾನ ಸಂಬಂಧ ಕಾರ್ಯಾದೇಶ ನೀಡುವುದು.

**ಆಯ್ಕೆಯಾದ ತಾಲ್ಲೂಕು ಮಟ್ಟದ ಸಂಘದ ಕರ್ತವ್ಯ ಮತ್ತು ಜವಾಬ್ದಾರಿಗಳುಃ**

- ಸಂಘವು ಅವರ ವ್ಯಾಪ್ತಿಯಲ್ಲಿ ತಲಾ 750 ರೈತರನ್ನು ಆಯ್ಕೆಮಾಡಿ ತಲಾ 30 ರೈತರು/ರೈತ ಮಹಿಳೆಯರನ್ನೊಳಗೊಂಡ 25 ಗುಚ್ಚವನ್ನು ರಚಿಸುವುದು.
- ಕ್ಷೇತ್ರ ಮಟ್ಟದಲ್ಲಿ ರೈತರ ಆಯ್ಕೆಗಾಗಿ ಈ ಕೆಳಗಿನ ಮಾನದಂಡಗಳನ್ನು ಅನುಸರಿಸುವುದು ಹಾಗೂ ಬಹುತೇಕ ಅಂಶಗಳಿಗೆ ತಾಳೆಯಾಗುವ ರೈತರನ್ನು ಆಯ್ಕೆ ಮಾಡುವುದು.
  - ✓ ರೈತರು ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು
  - ✓ ರಸಗೊಬ್ಬರಗಳು ಮತ್ತು ಕೀಟನಾಶಕಗಳ ಕನಿಷ್ಠ ಬಳಕೆ,
  - ✓ ಗುಡ್ಡುಗಾಡು, ಬುಡಕಟ್ಟು ಜನಾಂಗಗಳು ಹಾಗೂ ಮಳೆಯಾಶ್ರಿತ ಪ್ರದೇಶದ ರೈತರುಗಳಿಗೆ ಆದ್ಯತೆ
  - ✓ ರೈತರ ಸಾವಯವ ಸಂಪನ್ಮೂಲ ಉತ್ಪಾದನಾ ಸಾಮರ್ಥ್ಯ
  - ✓ ರೈತರು ಅನುಸರಿಸುತ್ತಿರುವ ಬೆಳೆ ಪದ್ಧತಿಗಳು ಮತ್ತು ಬೆಳೆ ವೈವಿಧ್ಯತೆ

- ✓ ಪ್ರಚಲಿತ ಮಿಶ್ರ ಬೇಸಾಯ ಪದ್ಧತಿಗಳು: ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ, ಜೇನು ಸಾಕಾಣಿಕೆ, ಮೀನು ಸಾಕಾಣಿಕೆ ಇತ್ಯಾದಿ.
- ✓ ಹೆಚ್ಚಿನ ಸಂಖ್ಯೆಯಲ್ಲಿ ಜಾನುವಾರುಗಳ ಇರುವಿಕೆ
- ✓ ವಿವಿದ್ದೋದ್ದೇಶ ವೃಕ್ಷಗಳ ಸಾಂದ್ರತೆ
- ✓ ಪ್ರಸ್ತುತ ರೈತರು ಅನುಸರಿಸುತ್ತಿರುವ ನೈಸರ್ಗಿಕ/ ಸಾವಯವ ಕೃಷಿ ಬೇಸಾಯದ ಮಟ್ಟ
- ✓ ರೈತರ ಗುಂಪುಗಳು / ಸ್ವಸಹಾಯ ಗುಂಪುಗಳ ಇರುವಿಕೆ
- ✓ ಸಾವಯವ ಕೃಷಿ ಪದ್ಧತಿಗೆ ಪರಿವರ್ತನೆಗೊಳ್ಳಲು ರೈತರುಗಳ ಪೂರ್ಣ ಒಪ್ಪಿಗೆ
- ✓ ತಂಡದ ಎಲ್ಲಾ ಸದಸ್ಯರ ಜಮೀನು ಆದಷ್ಟು ಒಂದೆಡೆ ಬರುವಂತೆ ಆಯ್ಕೆ ಮಾಡುವುದು.

- ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ರೈತ ಮಹಿಳೆಯರಿಗೆ ಆದ್ಯತೆ ನೀಡುವುದು. ಆದಷ್ಟು ಶೇ. 65 ರಷ್ಟು ಸಣ್ಣ ಮತ್ತು ಅತೀ ಸಣ್ಣ ರೈತರನ್ನು ಒಳಗೊಂಡಿರುವುದು (ತಾಲ್ಲೂಕು/ ಜಿಲ್ಲಾ ಮಟ್ಟದಲ್ಲಿಯಾದರೂ ಈ ಸಂಖ್ಯೆಯನ್ನು ಖಾತರಿಪಡಿಸುವುದು)
- ಸದರಿ ರೈತರನ್ನು ಆ ಜಿಲ್ಲೆಗೆ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆಯು ಆಯೋಜಿಸುವ ತರಬೇತಿ/ ಅಧ್ಯಯನ ಪ್ರವಾಸ/ಕ್ಷೇತ್ರೋತ್ಸವ ಇನ್ನಿತರೆ ಚಟುವಟಿಕೆಗಳಲ್ಲಿ ಒಳಪಡಿಸಿ ಸಾವಯವ ಪದ್ಧತಿಗೆ ಪರಿವರ್ತಿಸುವ ಜವಾಬ್ದಾರಿ ಹೊಂದುವುದು.
- ಪ್ರತಿ ಗುಚ್ಛದ 30 ರೈತರು/ರೈತ ಮಹಿಳೆಯರಿಗೆ ಅವಶ್ಯಕ ಸಾವಯವ ಕೃಷಿ ಪೂರಕ ಘಟಕಗಳನ್ನು (ಅನುಬಂಧ-3ರಲ್ಲಿರುವಂತೆ) ಒದಗಿಸಲು ಆ ವ್ಯಾಪ್ತಿಯ ಸಂಘವು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ತಾಲ್ಲೂಕಿನ ಸಕೃನಿ ಗಳಿಗೆ ಸಲ್ಲಿಸುವುದು.
- ತಾಲ್ಲೂಕುವಾರು ಕ್ರೋಢೀಕೃತ ಕ್ರಿಯಾ ಯೋಜನೆಯನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು ಜಿಲ್ಲಾ ಸಾವಯವ ಚಾಲನಾ ಸಮಿತಿಯ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸತಕ್ಕದ್ದು.
- ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ನೀಡುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬೇಕು.

## ಇ) ಮೂರನೇ ಹಂತ- ಸಾವಯವ ಕೃಷಿಕರು

- ಕ್ಷೇತ್ರ ಮಟ್ಟದಲ್ಲಿ ಆಯ್ಕೆಯಾಗುವ ರೈತ ಫಲಾನುಭವಿಗಳಿಗೆ ಸಾವಯವ ಕೃಷಿ ಪೂರಕ ಘಟಕಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.75 ಹಾಗೂ ಪ.ಜಾ/ಪಪಂ/ರೈತ ಮಹಿಳೆಯರಿಗೆ ಶೇ.90ರ ಸಹಾಯಧನದ ದರದಲ್ಲಿ (ಅನುಬಂಧ-3 ರಂತೆ) ಲಭ್ಯವಾಗುವ ಅನುದಾನ, ಸಮಯ ಹಾಗೂ ಬೇಡಿಕೆಯನ್ನಾಧರಿಸಿ ಅನುಷ್ಠಾನಗೊಳಿಸುವುದು.
- **ಪ್ರತಿಯೊಬ್ಬ ಫಲಾನುಭವಿಯು ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಾಗೂ ಸಾವಯವ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲು ಕಡ್ಡಾಯವಾಗಿ ಹಸಿರೆಲೆ ಗೊಬ್ಬರ, ದ್ವಿದಳ ಧಾನ್ಯಗಳ ಬೀಜಗಳನ್ನು ಬಿತ್ತನೆ ಮಾಡಿ ಜಮೀನಿಗೆ ಸೇರಿಸತಕ್ಕದ್ದು, ಇದನ್ನು ಆಯ್ಕೆಯಾದ ಸಂಘವು ಖಾತರಿ ಪಡಿಸಿಕೊಳ್ಳತಕ್ಕದ್ದು.**
- ಕ್ಷೇತ್ರ ಮಟ್ಟದಲ್ಲಿ ರೈತರಿಗೆ ಪಾವತಿಸಬೇಕಾದ ಸಹಾಯಧನವನ್ನು **"ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಆ ಕುಟುಂಬದ ರೈತ ಮಹಿಳೆಯ ಖಾತೆಗೆ ಪಾವತಿಸುವುದು"** ಹಾಗೂ ಕೆಲವೊಂದು ಘಟಕಗಳನ್ನು ಸವಲತ್ತುಗಳ ರೂಪದಲ್ಲಿ ವಿತರಿಸುವುದು.

- ಆಯ್ಕೆಯಾದ 30 ಜನ ಫಲಾನುಭವಿಗಳ ಗುಚ್ಛಗಳನ್ನು ಮುಂದಿನ ದಿನಗಳಲ್ಲಿ KSSOCA ಸಂಸ್ಥೆಯ ಮುಖಾಂತರ ಗುಂಪು ಸಾವಯವ ಪ್ರಮಾಣೀಕರಣ ಪ್ರಕ್ರಿಯೆಗೆ ಒಳಪಡಿಸುವುದು.

## ಒಟ್ಟಾರೆಯಾಗಿ ರಾಜ್ಯದಲ್ಲಿ ಸಾವಯವ ಸಿರಿ ಯೋಜನಾ ಅನುಷ್ಠಾನ:

- ಸಾವಯವ ಸಿರಿ ಯೋಜನೆಯು ಮೂರು ಹಂತಗಳ ಕಾರ್ಯಕ್ರಮವಾಗಿದ್ದು ಮೂರು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು.
- ಜಿಲ್ಲಾಮಟ್ಟದಲ್ಲಿ ಯೋಜನೆಯಡಿ ಆಯ್ಕೆಯಾಗುವ ಟ್ರಸ್ಟ್ /ಸೊಸೈಟಿ ಕಾಯ್ದೆಯಡಿ ನೊಂದಾಯಿತ ಸಾಮಾಜಿಕ ಸಂಸ್ಥೆಗಳು ಆ ಜಿಲ್ಲೆಯಲ್ಲಿ ಗುರುತಿಸಲಾಗುವ ರೈತರನ್ನು ಸಾವಯವ ಕೃಷಿಯ ವ್ಯಾಪ್ತಿಗೆ ಉತ್ತೇಜಿಸುವ ಜವಾಬ್ದಾರಿ ಹೊಂದಿರುತ್ತವೆ.
- ಸಾಮಾಜಿಕ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸಬೇಕಾಗಿರುವ ಕಾರ್ಯಕ್ರಮಗಳಿಗೆ ಬಿಡುಗಡೆಯಾಗುವ ಅನುದಾನವನ್ನು ಜಿಲ್ಲೆಯ ಆ ವಿಭಾಗದ ಉಪ ಕೃಷಿ ನಿರ್ದೇಶಕರು ಹಾಗೂ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆ ನಿಯೋಜಿಸುವ ಪ್ರತಿನಿಧಿಯ ಹೆಸರಿನಲ್ಲಿ ಜಂಟಿ ಬ್ಯಾಂಕ್ ಖಾತೆ ತೆಗೆದು ಬಿಡುಗಡೆಯಾದ ಅನುದಾನವನ್ನು ಮಾರ್ಗಸೂಚಿಯನ್ವಯ ಜಂಟಿಯಾಗಿ ವ್ಯವಹಾರ ನಿರ್ವಹಿಸತಕ್ಕದ್ದು.
- ತಾಲ್ಲೂಕಿನಿಂದ ಆಯ್ಕೆಯಾಗುವ ಟ್ರಸ್ಟ್/ಸೊಸೈಟಿ ಕಾಯ್ದೆಯಡಿ ನೊಂದಾಯಿತ ಸಾವಯವ ಕೃಷಿಕರ ಸಂಘಗಳು ಪ್ರತಿ ತಾಲ್ಲೂಕಿನಲ್ಲಿ 750 ರೈತರುಗಳನ್ನು ಗುರುತಿಸಿ ತಲಾ 30 ರೈತರನ್ನೊಳಗೊಂಡಂತೆ ಪ್ರತಿ ತಾಲ್ಲೂಕಿನಲ್ಲಿ 25 ಗುಚ್ಛಗಳನ್ನು ರಚಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.
- ಯೋಜನೆ ಅನುಷ್ಠಾನ ಪೂರ್ವ ತಾಲ್ಲೂಕಿನಿಂದ ಆಯ್ಕೆಯಾದ ಎಲ್ಲಾ ರೈತರ ಜಮೀನಿನ ಮಣ್ಣು ಮಾದರಿಗಳನ್ನು ಕಡ್ಡಾಯವಾಗಿ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿ ಮಣ್ಣು ಆರೋಗ್ಯ ಚೀಟಿಯನ್ನು ಪ್ರತಿಯೊಬ್ಬರಿಗೂ ವಿತರಿಸಿ ದಾಖಲಾತಿಗಳನ್ನು ಸಂಬಂಧಪಟ್ಟ ಸಂಘಗಳು ದಾಖಲಿಸಲು ಕ್ರಮವಹಿಸುವುದು.
- ಆಯ್ಕೆಯಾದ ಸ್ಥಳದ ಫಲಾನುಭವಿ ರೈತ/ ರೈತ ಮಹಿಳೆಯರನ್ನು ಆ ಜಿಲ್ಲೆಯಲ್ಲಿ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆಯು ಆಯೋಜಿಸುವ ತರಬೇತಿ/ಅಧ್ಯಯನ ಪ್ರವಾಸ/ ಕ್ಷೇತ್ರೋತ್ಸವ ಇನ್ನಿತರೆ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಸಂಬಂಧಪಟ್ಟ ಆಯ್ಕೆಯಾದ ಸಂಘಗಳು ಕ್ರಮವಹಿಸುವುದು.
- ಸಾವಯವ ಕೃಷಿ ಪದ್ಧತಿಗೆ ಪರಿವರ್ತಿಸಲು ಅವಶ್ಯವಿರುವ ಘಟಕಗಳ ಅನುಷ್ಠಾನಕ್ಕೆ ಸಂಘಗಳು ತಮ್ಮ ವ್ಯಾಪ್ತಿಯಿಂದ ಆಯ್ಕೆಯಾದ ಯೋಜನಾ ಪ್ರದೇಶದ ಪ್ರಾಥಮಿಕ ಸಮೀಕ್ಷೆ(ನಿಗದಿತ ನಮೂನೆಯಲ್ಲಿ) ಹಾಗೂ ಫಲಾನುಭವಿ ರೈತರುಗಳ ಬೇಡಿಕೆಯನ್ನಾಧರಿಸಿ ಫಲಾನುಭವಿವಾರು ಸೂಕ್ತ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವುದು.
- ಕ್ಷೇತ್ರ ಮಟ್ಟದಲ್ಲಿ ಆಯ್ಕೆಯಾಗುವ ಸಾವಯವ ಕೃಷಿಕರಿಗೆ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇ.75ರಷ್ಟು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ರೈತ ಮಹಿಳೆ ಫಲಾನುಭವಿಗಳಿಗೆ ಶೇ.90ರಷ್ಟು ಸಹಾಯಧನದಲ್ಲಿ ಸಾವಯವ ಕೃಷಿಗೆ ಪೂರಕವಾದ ಘಟಕಗಳನ್ನು ಒದಗಿಸಲಾಗುವುದು.

- ಪ್ರಾಥಮಿಕವಾಗಿ ಅನುಷ್ಠಾನಗೊಂಡ ಪ್ರದೇಶದ ರೈತ ಫಲಾನುಭವಿಗಳಿಗೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಾಗೂ ಸಾವಯವ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲು ಕಡ್ಡಾಯವಾಗಿ ಹಸಿರೆಲೆ ಗೊಬ್ಬರ ಬೀಜ ವಿತರಣೆ, ಸಾವಯವ ಗೊಬ್ಬರ ಉತ್ಪಾದನೆ, ಪೋಷಕಾಂಶ ನಿರ್ವಹಣೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಆದ್ಯತೆ ನೀಡುವುದು.
- ಬಯೋಡೈಜೆಸ್ಟರ್ ಘಟಕ ನಿರ್ಮಿಸಲು ಇಚ್ಛಿಸುವ ಆಯ್ದ ಫಲಾನುಭವಿಗಳು ಈಗಾಗಲೇ ನೆಲಹಾಸು ಮತ್ತು ಗಂಜಲ ಸಂಗ್ರಹಣ ತೊಟ್ಟಿಯನ್ನು ಕಡ್ಡಾಯವಾಗಿ ನಿರ್ಮಿಸಿಕೊಂಡಿರಬೇಕು. ಇಲ್ಲವಾದಲ್ಲಿ ಪ್ರಾರಂಭದಲ್ಲಿ ನೆಲಹಾಸು ನಿರ್ಮಿಸಲು ಸಹಾಯಧನ ನೀಡಿ ಮುಂದಿನ ವರ್ಷದಲ್ಲಿ ಬಯೋಡೈಜೆಸ್ಟರ್ ನಿರ್ಮಾಣಕ್ಕೆ ಪರಿಗಣಿಸುವುದು.
- ತಾಲ್ಲೂಕುವಾರು ಸಿದ್ದಪಡಿಸಲಾಗುವ ಕ್ರಿಯಾ ಯೋಜನೆಯನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸಿ ಕ್ರೂಢೀಕೃತ ಕ್ರಿಯಾ ಯೋಜನೆಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಸಾವಯವ ಚಾಲನಾ ಸಮಿತಿಯ ಅನುಮೋದನೆಯೊಂದಿಗೆ ಆಯ್ಕೆಯಾದ ಸಂಘಗಳು ಅನುಷ್ಠಾನಗೊಳಿಸುವುದು.
- ತಾಲ್ಲೂಕಿನಲ್ಲಿ ಆಯ್ಕೆಯಾಗುವ ಸಂಘಗಳಿಗೆ ಯೋಜನೆಯ ಅಂಕಿ ಅಂಶಗಳ ನಿರ್ವಹಣೆಗೆ ಅವಶ್ಯಕ ಲೇಖನ ಸಾಮಗ್ರಿಗಳ ವೆಚ್ಚಕ್ಕೆ ಅವಕಾಶ ಕಲ್ಪಿಸಿಕೊಳ್ಳುವುದು.

II. **2021-22 ನೇ ಸಾಲಿನ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳ ಕ್ರಿಯಾ ಯೋಜನೆ (ಅನುಬಂಧ-1) ಯ ಕ್ರ.ಸಂ II ರಿಂದ X ರ ವರೆಗೆ ನಮೂದಿಸಲಾಗಿರುವ ಎಲ್ಲಾ ಕಾರ್ಯಕ್ರಮಗಳು ಪ್ರಸ್ತಾವನೆ ಆಧಾರಿತ ಕಾರ್ಯಕ್ರಮಗಳಾಗಿದ್ದು, ಸದರಿ ಕಾರ್ಯಕ್ರಮಗಳಡಿ ಸ್ವೀಕರಿಸಲಾಗುವ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯು ಅಖೈರುಗೊಳಿಸುವ ತಜ್ಞರ ಸಮಿತಿ (Expert committee)ಯಿಂದ ಪರಿಶೀಲಿಸಿ ಸಮಿತಿಯ ಶಿಫಾರಸ್ಸಿನಂತೆ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಅನುಮೋದನೆಯೊಂದಿಗೆ ಸಂಬಂಧಿತ ಅನುಷ್ಠಾನ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸುವುದು. ಸಾವಯವ ಉತ್ಪನ್ನಗಳ ಮಾರುಕಟ್ಟೆ ಅಭಿವೃದ್ಧಿ ಚಟುವಟಿಕೆಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಕೃಇ/35/ಕೃಉಇ/2016, ಬೆಂಗಳೂರು ದಿನಾಂಕ:16.08.2016 ರನ್ವಯ ಈ ಹಿಂದೆ ನಿಯುಕ್ತಿಗೊಳಿಸಲಾಗಿರುವ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ ಸಂಸ್ಥೆ (KAPPEC)ಯನ್ನು ಪ್ರಸ್ತಾವನೆ ಆಧಾರಿತ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ನೋಡಲ್ ಸಂಸ್ಥೆಯನ್ನಾಗಿ ಮುಂದುವರೆಸುವುದು.**

III. **ಆಡಳಿತಾತ್ಮಕ ವೆಚ್ಚ:**

**2021-22 ನೇ ಸಾಲಿನ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳ ಕ್ರಿಯಾ ಯೋಜನೆ (ಅನುಬಂಧ-1) ಯ ಕ್ರ.ಸಂ XI ಆಡಳಿತಾತ್ಮಕ ವೆಚ್ಚಗಳು:**

**ಅ). ಜಿಲ್ಲೆಗಳಿಗೆ:** ಯೋಜನೆ ಅನುಷ್ಠಾನದ ಆಡಳಿತಾತ್ಮಕ ವೆಚ್ಚಗಳಿಗಾಗಿ ಪ್ರತಿ ಜಂಟಿ ಕೃಷಿ ನಿರ್ದೇಶಕರ ಕಛೇರಿಗಳಿಗೆ ಪ್ರತಿ ವರ್ಷಕ್ಕೆ ರೂ.**50,000/-** ದಂತೆ ಅನುದಾನ ಬಿಡುಗಡೆ ಮಾಡುವುದು. ಈ ಅನುದಾನವನ್ನು ಜಿಲ್ಲೆಗಳಲ್ಲಿ "ಸಾವಯವ ಸಿರಿ" ಯೋಜನೆಯ ಪ್ರಚಾರ/ ತರಬೇತಿ/ಕಾರ್ಯಾಗಾರ/ಮೇಳ/ವಸ್ತುಪ್ರದರ್ಶನ/ಗ್ರಾಹಕರಲ್ಲಿ ಸಾವಯವ ಕೃಷಿಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಇನ್ನಿತರೆ ಸಂಬಂಧಿತ ಕಾರ್ಯಕ್ರಮಗಳು, ಜಿಲ್ಲಾ ಸಾವಯವ ಕೃಷಿ ಚಾಲನಾ ಸಮಿತಿ ಸಭೆ ಆಯೋಜನೆ, ಯೋಜನೆಯ ಉಸ್ತುವಾರಿ,

ಮೌಲ್ಯಮಾಪನ ಹಾಗೂ ಯೋಜನೆಯ ಸಮರ್ಪಕ ಅನುಷ್ಠಾನದಲ್ಲಿ ತಗುಲುವ ಇನ್ನಿತರೆ ಸಂಬಂಧಿತ ವೆಚ್ಚಗಳು. ಯೋಜನೆಯಡಿ ಈ ಕೆಳಕಂಡ ಅಂಶಗಳ ಪ್ರಗತಿ/ಅಂಕಿ ಅಂಶಗಳನ್ನು ತಾಲ್ಲೂಕುಗಳಿಂದ ಪಡೆದು ಕಂಪ್ಯೂಟರ್ ನಲ್ಲಿ ಕ್ರೋಢೀಕರಣ (Progress Compilation)ಗೊಳಿಸುವುದು.

- ಯೋಜನೆಯ ಅನುಷ್ಠಾನದ ಆರ್ಥಿಕ ಮತ್ತು ಭೌತಿಕ ಪ್ರಗತಿ
- ಯೋಜನೆ ಅನುಷ್ಠಾನ ಪೂರ್ವ ತಾಲ್ಲೂಕಿನಿಂದ ಆಯ್ಕೆಯಾದ ಎಲ್ಲಾ ರೈತರ ಜಮೀನಿನ ಮಣ್ಣು ಮಾದರಿಗಳ ವಿಶ್ಲೇಷಣಾ ಮಾಹಿತಿ
- ರೈತ ಫಲಾನುಭವಿಗಳ ಕ್ಷೇತ್ರದಲ್ಲಿ ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಾಗೂ ಸಾವಯವ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲು ಬಳಸಲಾಗಿರುವ ಹಸಿರೆಲೆ ಗೊಬ್ಬರ ಬೀಜ, ಸಾವಯವ ಗೊಬ್ಬರ ಉತ್ಪಾದನೆ, ಪೋಷಕಾಂಶ ನಿರ್ವಹಣೆ ಸಂಬಂಧಿಸಿದಂತೆ ಅಂಕಿ ಅಂಶಗಳು
- ಯೋಜನೆಯಡಿ ಬೆಳೆವಾರು ವಿಸ್ತೀರ್ಣ
- ಫಲಾನುಭವಿಗಳ ವಿವರ ಮತ್ತು ಹಿಡುವಳಿ ಪ್ರದೇಶ
- ರೈತ ಫಲಾನುಭವಿಗಳ ಕ್ಷೇತ್ರದಲ್ಲಿ ರಸಗೊಬ್ಬರ ಮತ್ತು ಪೀಡೆನಾಶಕ ಶೇಷಾಂಶಗಳ ಉಳಿಕೆ (Pesticide residue analysis) ಬಗ್ಗೆ ಮಾಹಿತಿ ಸಂಗ್ರಹಣೆ
- ಗುಂಪು ಪ್ರಮಾಣೀಕರಣದ ಬಗ್ಗೆ ಮಾಹಿತಿ
- ಮಾರುಕಟ್ಟೆಗೆ ಲಭ್ಯವಿರುವ ಉತ್ಪನ್ನಗಳ ಪ್ರಮಾಣ
- ಯಶೋಗಾಥೆಗಳ ದಾಖಲಾತಿ

**ಜಿಲ್ಲಾ ಯೋಜನೆ ಉಸ್ತುವಾರಿ ಘಟಕ:-** ಜಿಲ್ಲೆಗಳಲ್ಲಿ ಯೋಜನೆಯ ಅನುಷ್ಠಾನದ ಉಸ್ತುವಾರಿಗಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಗಳಲ್ಲಿ ಉಸ್ತುವಾರಿ ಘಟಕ ಸ್ಥಾಪಿಸಿ ಅನುಷ್ಠಾನಗೊಳಿಸುವುದು.

**ಆ). ತಾಲ್ಲೂಕುಗಳಿಗೆ:**

- ಪ್ರತಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳ ಕಛೇರಿಗೆ ಪ್ರತಿ ವರ್ಷಕ್ಕೆ ರೂ.**25,000/**ದಂತೆ ಅನುದಾನ ಬಿಡುಗಡೆ ಮಾಡುವುದು. ಈ ಅನುದಾನದಲ್ಲಿ ಪ್ರಗತಿ ಪರಿಶೀಲನೆ ಸಭೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಸಂಬಂಧಿಸಿದ ಸಭೆಗಳ ಆಯೋಜನೆ ಮತ್ತು ಯೋಜನಾ ಪ್ರದೇಶ/ ಕ್ಷೇತ್ರಮಟ್ಟದಲ್ಲಿ ಅನುಭವ ಹಂಚಿಕೆ ಚರ್ಚೆ ಹಾಗೂ ಈ ಸಂಬಂಧದ ಕ್ಷೇತ್ರ ಭೇಟಿಗಳನ್ನು ಆಯೋಜಿಸಲು ಅಲ್ಲದೇ ಯೋಜನೆಯ ಅಂಕಿ ಅಂಶಗಳ ನಿರ್ವಹಣೆಗೆ ಅವಶ್ಯಕ ಲೇಖನ ಸಾಮಗ್ರಿಗಳನ್ನು ಒದಗಿಸಲು ಅಲ್ಲದೇ ಯೋಜನೆಯ ಸಮರ್ಪಕ ಅನುಷ್ಠಾನ ಸಂಬಂಧಿತ ಯಾವುದೇ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಲು ಅವಕಾಶ ಕಲ್ಪಿಸುವುದು.
- ತಾಲ್ಲೂಕಿನಲ್ಲಿ ಆಯ್ಕೆಯಾಗುವ ಸಂಘಗಳಿಗೆ ಯೋಜನೆಯ ಅಂಕಿ ಅಂಶಗಳ ನಿರ್ವಹಣೆಗೆ ಅವಶ್ಯಕ ಲೇಖನ ಸಾಮಗ್ರಿಗಳ ವೆಚ್ಚಕ್ಕೆ ಅವಕಾಶ ಕಲ್ಪಿಸಿಕೊಳ್ಳುವುದು.

**ಇ) ಕೇಂದ್ರ ಕಛೇರಿಗೆ:**

- ✓ ಕೇಂದ್ರ ಕಛೇರಿಯ ಸಾವಯವ ಕೃಷಿ ಘಟಕವನ್ನು ಬಲವರ್ಧಿಸಿ ಸಲು ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಅನುಮೋದನೆ ಮೇರೆಗೆ ಯೋಜನೆಯ ಪ್ರಗತಿ ಕ್ರೋಢಿಕರಣಕ್ಕಾಗಿ ಮತ್ತು online updatingಗಾಗಿ ತಂತ್ರಾಂಶವನ್ನು (Software) ಅಭಿವೃದ್ಧಿಪಡಿಸುವುದು. ಸಾವಯವ ಉತ್ಪನ್ನಗಳಿಗೆ ನೇರ ಮಾರಾಟ ವ್ಯವಸ್ಥೆ ಕಲ್ಪಿಸಲು ವೆಬ್ ಸೈಟ್/ e-Platform ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೆಯೇ ಯೋಜನೆಯ ಸಮರ್ಪಕ ಅನುಷ್ಠಾನದ ಸಂಬಂಧ ಅವಶ್ಯಕ ಅನೀರಿಕ್ಷಿತ ಇನ್ನಿತರೆ ಎಲ್ಲಾ ಆಡಳಿತಾತ್ಮಕ ವೆಚ್ಚಗಳು.

# ಅನುಬಂಧ-3: ಯೋಜನೆಯಡಿ ಕ್ಷೇತ್ರಮಟ್ಟದಲ್ಲಿ ಆಯ್ಕೆಯಾಗುವ ರೈತರಿಗೆ ವಿತರಿಸಬಹುದಾದ ಸಾವಯವ ಕೃಷಿ ಪೂರಕ ಪರಿಕರ/ಘಟಕಗಳು

| ಕ್ರ. ಸಂ | ಕಾರ್ಯಕ್ರಮ/ಘಟಕಗಳು | ಪರಿಕರಗಳು | ಷರಾ |
|---|---|---|---|
| 1 | ಹಸಿರೆಲೆ ಗೊಬ್ಬರ ಬೀಜಗಳು ಹಾಗೂ ನೆಲಹೊದಿಕೆಗೆ ಬೇಕಾಗಿರುವ ದ್ವಿದಳಧಾನ್ಯ ಬೀಜಗಳು (Cover Crop, Border Crop,Trap Crop) ಇತ್ಯಾದಿ | ಸನ್ಹೆಂಪ್, ಡಯಾಂಚ, ಅಲಸಂದೆ, ಹುರುಳಿ. ವೆಲ್ವೆಟ್ಬೀನ್ಸ್ ಇತ್ಯಾದಿ | ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಜಲಾನಯನ ಅಭಿವೃದ್ಧಿ ಇಲಾಖೆ, ರಾಜ್ಯ ಸರ್ಕಾರದ ಇತರ ಇಲಾಖೆಗಳು, ಕೇಂದ್ರ ಸರ್ಕಾರದ ಇಲಾಖೆಗಳು/ಸಂಸ್ಥೆಗಳು, ರಾಜ್ಯದ ಕೃಷಿ/ ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಇತ್ತೀಚಿನ ಅಥವಾ ಚಾಲ್ತಿಯಲ್ಲಿರುವ ದರಕರಾರು ಒಪ್ಪಂದದನ್ವಯ ವಿವಿಧ ಸಾವಯವ ಪರಿಕರಗಳವಿತರಣೆಗೆ ಕ್ರಮಕೈಗೊಳ್ಳುವುದು |
| 2 | ದೇಶಿಯ ಬೆಳೆಗಳ ಬೀಜ ಮತ್ತು ಸಸಿಗಳ ವಿತರಣೆ, (Inter crop, Multi crop) ತೋಟಗಾರಿಕೆ ಬೆಳೆಗಳ ಸಸಿಗಳು/ ತರಕಾರಿಬೀಜಗಳು | ಪ್ರತಿ ಎಕರೆಗೆ ರೂ. 1000/- ಪ್ರತಿ ರೈತ ಕುಟುಂಬಕ್ಕೆ ಗರಿಷ್ಠರೂ.2,000/- | |
| 3 | ಜೈವಿಕ ಗೊಬ್ಬರಗಳು/ ಸಾವಯವ ಗೊಬ್ಬರ / ಎರೆಹುಳುಗೊಬ್ಬರ | ಜೈವಿಕ ಗೊಬ್ಬರಗಳು (ಕ್ಯಾರಿಯರ್ಬೇಸ್ಡ್) ಜೈವಿಕ ಗೊಬ್ಬರಗಳು(ದ್ರವ) ಸಾವಯವ/ ಎರೆಗೊಬ್ಬರ, | |
| 4 | ಜೈವಿಕ ಪೀಡೆನಾಶಕಗಳು | ಅಜಾಡಿರಿಕ್ಟೀನ್ 300ppm, ಬ್ಯಾಸಿಲಸ್ಥುರಂಜೆನ್ಸಿಸ್, ಎನ್.ಪಿ.ವಿ. 2% ಎಎಸ್, ಟ್ರೈಕೋಡರ್ಮ1%, ಸೂಡೋಮೋನಾಸ್0.5%, | |
| 5 | ದ್ರವರೂಪದ ಬೀಜಾಮೃತ/ ಜೀವಾಮೃತ ಇತ್ಯಾದಿ ತಯಾರಿಕೆಗೆ 400ಲೀ. ಸಾಮರ್ಥ್ಯದ ಸಿಮೆಂಟ್ ತೊಟ್ಟಿ ನಿರ್ಮಾಣ | ಪ್ರತಿ ಘಟಕಕ್ಕೆ ರೂ.5000/- ರಂತೆ | |
| 6 | **ಬಯೋಡೈಜೆಸ್ಟರ್**<br>1)15`*4`*4` ಅಳತೆಯ ಡೈಜೆಸ್ಟರ್ ಮತ್ತು 5`*4`*4` ಅಳತೆಯ ಸಂಗ್ರಹಣ ತೊಟ್ಟಿ<br>2)10`*4`*4` ಅಳತೆಯ ಡೈಜೆಸ್ಟರ್ ಮತ್ತು 4`*4`*4` ಅಳತೆಯ ಸಂಗ್ರಹಣತೊಟ್ಟಿ (ಸಿಮೆಂಟ್ ಬಳಸಿ ನಿರ್ಮಿತ / ಹೆಚ್.ಡಿ.ಪಿ.ಇ.ಸಿದ್ಧಸಂಚಾರಿ ಘಟಕ )<br>3) 1HP ಸ್ಲರಿಪಂಪ್- ಸಂಗ್ರಹವಾಗುವ ಜೀವಸಾರವನ್ನು ಸಾಗಿಸಲು. (ಈಗಾಗಲೇ ಬಯೋಡೈಜೆಸ್ಟರ್ ಘಟಕ ನಿರ್ಮಾಣ ಮಾಡಿಕೊಂಡಿರುವ ಫಲಾನುಭವಿಗಳಿಗೆ ಮಾತ್ರ)<br>ಷರಾ: ಬಯೋಡೈಜೆಸ್ಟರ್ ನಿರ್ಮಿಸಲು ಇಚ್ಛಿಸುವ ಆಯ್ದ ಫಲಾನುಭವಿಗಳು ಈಗಾಗಲೇ ನೆಲಹಾಸು ಮತ್ತು ಗಂಜಲ ಸಂಗ್ರಹಣ ತೊಟ್ಟಿಯನ್ನು ನಿರ್ಮಿಸಿಕೊಂಡಿದ್ದಲ್ಲಿ ಆದ್ಯತೆ ನೀಡಲಾಗುವುದು. | ಪ್ರತಿ ಘಟಕಕ್ಕೆ ರೂ 52000/-ರಂತೆ<br>ಪ್ರತಿ ಘಟಕಕ್ಕೆ ರೂ. 36500/- ರಂತೆ<br>ಪ್ರತಿ ಘಟಕಕ್ಕೆ ರೂ.10,000/-ರಂತೆ | |
| 7 | ಎರಡು ಹಸು ನಿಲ್ಲುವ ಜಾಗಕ್ಕೆ10x12 ಅಡಿ ಅಳತೆಯ ನೆಲಹಾಸು ನಿರ್ಮಾಣ (ಗಂಜಲ ಸಂಗ್ರಹಿಸುವ ತೊಟ್ಟಿಯನ್ನೊಳಗೊಂಡಂತೆ) / ನೆಲಹಾಸುಮೇಲಿನ ಹೊದಿಕೆ. | ಪ್ರತಿ ಘಟಕಕ್ಕೆ ರೂ19000/-ರಂತೆ | |
| 8 | ಸ್ಥಳೀಯ/ದೇಸಿಪೌಷ್ಟಿಕ ಹಾಗೂ ಔಷಧಿಗುಣಗಳುಳ್ಳ ರಾಜ್ಯದಲ್ಲಿ ನಶಿಸಿ ಹೋಗುತ್ತಿರುವ ಬೆಳೆಗಳನ್ನು ಉತ್ತೇಜಿಸಲು ಪ್ರೋತ್ಸಾಹ -ರೈತಸಿರಿ ಯೋಜನೆ ಮಾದರಿಯಲ್ಲಿ | ಪ್ರತಿ ಎಕರೆಗೆ ರೂ.5000/-ಗಳ ಪ್ರೋತ್ಸಾಹಧನವನ್ನು ಒಂದು ಎಕರೆ ವಿಸ್ತೀರ್ಣಕ್ಕೆ ಮಿತಿಗೊಳಿಸಿ ಆ | |

| | | | |
|---|---|---|---|
| | ಪ್ರೋತ್ಸಾಹಧನ ನೀಡುವುದು (ಸಿರಿಧಾನ್ಯಗಳನ್ನು ಹೊರತುಪಡಿಸಿ) | ಕುಟುಂಬದ ರೈತಮಹಿಳೆಯ ಬ್ಯಾಂಕ್ ಖಾತೆಗೆ ಪಾವತಿಸುವುದು. | |
| 9 | "ನಮ್ಮ ಹೊಲ ನಮ್ಮ ಕೆರೆ" ಯೋಜನೆಯಡಿ ನೀರು ಸಂಗ್ರಹಣ ರಚನೆಗಳ ನಿರ್ಮಾಣಕ್ಕೆ ಸಹಾಯಧನ ಒದಗಿಸುವುದು. | ಪಾಲಿಥೀನ ಹೊದಿಕೆ ಸಹಿತ ನೀರು ಸಂಗ್ರಹಣ ರಚನೆ ನಿರ್ಮಾಣ, ಡೀಸೆಲ್ಪಂಪ್ಸೆಟ್, ತುಂತುರು ನೀರಾವರಿ/ ಹನಿ ನೀರಾವರಿ ಘಟಕ/ನೀರು ಸಾಗಣೆ ಪೈಪುಗಳು | |
| 10 | ಸಾವಯವ ಉತ್ಪನ್ನಗಳ ಕೊಯ್ಲು ನಂತರದ ನಷ್ಟ ಕಡಿಮೆ ಮಾಡುವುದು | ಸಾವಯವ ಉತ್ಪನ್ನಗಳ ಕೊಯ್ಲು ನಂತರದ ನಷ್ಟ ಕಡಿಮೆ ಮಾಡಲು, ಉತ್ಪನ್ನಗಳ ಸಂಸ್ಕರಣೆ, ಸಂಗ್ರಹಣೆ ಕೈಗೊಳ್ಳಲು ತಾಡಪತ್ರೆ | |
| 1 | ಸಾವಯವ ಕೃಷಿಯಲ್ಲಿ ತೊಡುಗುವ/ ತೊಡಗಿರುವ ನೋಂದಾಯಿತ ಸಹಕಾರ ಸಂಸ್ಥೆಗಳು/ ಗುಂಪುಗಳು / ಸಂಸ್ಥೆಗಳಿಗೆ ಸಾವಯವ ಉತ್ಪನ್ನಗಳ ಮಾರಾಟ ಸಂಬಂಧ ಸಾಗಾಣಿಕೆಗಾಗಿ ಬೆಂಬಲ ನೀಡುವುದು. | ಜಿಲ್ಲೆಗಳಲ್ಲಿ ಪ್ರಸ್ತಾವನೆಗಳು ಸ್ವೀಕೃತವಾದಲ್ಲಿ ಅಂತಹ ಪ್ರಸ್ತಾವನೆಗಳನ್ನು ಜಿಲ್ಲಾ ಚಾಲನಾ ಸಮಿತಿಯ ಶಿಫಾರಸ್ಸಿನೊಂದಿಗೆ ಕೇಂದ್ರ ಕಛೇರಿಗೆ ಸಲ್ಲಿಸುವುದು. ಕೇಂದ್ರ ಕಛೇರಿಯಲ್ಲಿ ಸ್ವೀಕರಿಸಲಾಗುವ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯು ಅಖೈರುಗೊಳಿಸುವ ತಜ್ಞರ ಸಮಿತಿ (Expert committee) ಯಿಂದ ಪರಿಶೀಲಿಸಿ ಅದರ ಶಿಫಾರಸ್ಸಿನಂತೆ ಸಮಿತಿಯ ಅನುಮೋದನೆಯೊಂದಿಗೆ ಸಹಾಯಧನ ಒದಗಿಸುವುದು. | **2ನೇ ವರ್ಷದಲ್ಲಿ ಅನುಷ್ಠಾನ** |
| 2 | ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಪದವೀಧರರಿಗೆ ಸಾವಯವ ಪರಿಕರಗಳು/ ಸಾವಯವ ಉತ್ಪನ್ನಗಳ ಮಾರಾಟ ಮಳಿಗೆ ಸ್ಥಾಪಿಸಲು ಆರ್ಥಿಕ ಸಹಾಯ ಒದಗಿಸುವುದು | | |
| 3 | ದೊಡ್ಡ ಪ್ರಮಾಣದ ಎರೆಹುಳು, ಗೊಬ್ಬರ ತಯಾರಿಕಾ ಘಟಕ ಸ್ಥಾಪನೆ/ಎರೆಜಲ (Vermi wash) ತಯಾರಿಕಾ ಘಟಕಸ್ಥಾಪನೆ | | |
| 4 | ಗುಂಪು ಪ್ರಮಾಣೀಕರಣ ಮತ್ತು ಮಾರುಕಟ್ಟೆ ಅಭಿವೃದ್ಧಿ | ಗುಂಪು ಪ್ರಮಾಣೀಕರಣಕ್ಕೆ, ಗುಂಪುಗಳು ಯೋಜನಾ ಅನುಷ್ಠಾನ ಪ್ರದೇಶವನ್ನುಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆಯ ಮುಖಾಂತರ ನೊಂದಾಯಿಸಿಕೊಳ್ಳುವುದು | |
| **ಷರಾ: 2021-22ನೇ ಸಾಲಿನಲ್ಲಿ ಮೇಲಿನ ಅನುಮೋದಿತ ಪರಿಕರಗಳು/ ಘಟಕಗಳನ್ನು ಅನುಷ್ಠಾನಗೊಳಿಸಲು ಒಟ್ಟು ರೂ.356.00 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ಅನುಷ್ಠಾನದ ಅವಧಿಯಲ್ಲಿ ಲಭ್ಯವಾಗುವ ಅನುದಾನ, ಸಮಯ ಹಾಗೂ ಬೇಡಿಕೆಯನ್ನಾಧರಿಸಿ ಅನುಷ್ಠಾನಗೊಳಿಸುವುದು.** | | | |

**ಷರಾ:**

1. ಈ ಯೋಜನೆಯಡಿ ಸಾವಯವ ಕೃಷಿ ಪೂರಕ ಘಟಕಗಳ ಅನುಷ್ಠಾನದಲ್ಲಿ ಸಾಮಾನ್ಯ ರೈತರಿಗೆ ಶೇ.75ರ ಸಹಾಯಧನ ಒದಗಿಸಲಾಗುವುದು. ಆಯ್ಕೆಯಾದ ತಂಡದ ಮಹಿಳಾ ಸದಸ್ಯರ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳ ಹೆಸರಿನಲ್ಲಿ ಜಮೀನು ಇದ್ದಲ್ಲಿ ಅಂತಹವರಿಗೆ ಶೇ.90ರ ಸಹಾಯಧನ ನೀಡಲಾಗುವುದು.
2. ಕ್ರ.ಸಂ. 5,6,7 & 9ಕ್ಕೆ ಸಂಬಂಧಿಸಿದ ಘಟಕಗಳ ನಿರ್ಮಾಣಕ್ಕೆ ಆಯ್ಕೆಯಾದ ಫಲಾನುಭವಿಗಳು ಈಗಾಗಲೇ ಇಲಾಖೆಯ ಯಾವುದಾದರೂ ಯೋಜನೆಯಡಿಯಲ್ಲಿ ಸಹಾಯಧನ ಪಡೆದಿದ್ದಲ್ಲಿ ಅಂತಹ ಫಲಾನುಭವಿಗಳಿಗೆ ಕೃಷಿ ಇಲಾಖೆಯಿಂದ ಯಾವುದೇ ಯೋಜನೆಯಡಿಯಲ್ಲಿ ಯಾವುದೇ ಘಟಕ ನಿರ್ಮಾಣಕ್ಕೆ ಸಹಾಯಧನವನ್ನು ನೀಡಲಾಗುವುದಿಲ್ಲ.
3. ಪ್ರತಿಯೊಬ್ಬ ಫಲಾನುಭವಿಯು ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಾಗೂ ಸಾವಯವ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲು ಕಡ್ಡಾಯವಾಗಿ ಹಸಿರೆಲೆ ಗೊಬ್ಬರ ಬೀಜಗಳನ್ನು

ಖರೀದಿಸಿ ಬಿತ್ತನೆ ಮಾಡಿ ಜಮೀನಿಗೆ ಸೇರಿಸತಕ್ಕದ್ದು, ಇದನ್ನು ಖಾತರಿ ಪಡಿಸಿಕೊಳ್ಳತಕ್ಕದ್ದು.

4. ಕ್ಷೇತ್ರ ಮಟ್ಟದಲ್ಲಿ ರೈತರಿಗೆ ನೀಡಬೇಕಾಗಿರುವ ಘಟಕಗಳ ಪೈಕಿ ಎರಡು ಹಸು ನಿಲ್ಲುವ ಜಾಗಕ್ಕೆ ನೆಲಹಾಸು/ಮ್ಯಾಟ್ ಘಟಕದಡಿ ಮ್ಯಾಟ್ ವಿತರಣೆಗೆ ಆದ್ಯತೆ ನೀಡುವುದು
5. ತಾಲ್ಲೂಕಿನಲ್ಲಿ ನಿಗದಿಪಡಿಸಿರುವ 750 ಫಲಾನುಭವಿಗಳಿಗಿಂತ ಹೆಚ್ಚಿನ ರೈತರು ಸಾವಯವ ಕೃಷಿಗೆ ಒಲವು/ಆಸಕ್ತಿ ತೋರಿದಲ್ಲಿ ಪ್ರತಿ ತಾಲ್ಲೂಕಿಗೆ ಕ್ರ. ಸಂ. 1, 2 & 3 ಪರಿಕರಗಳನ್ನು ಹೆಚ್ಚುವರಿಯಾಗಿ ಗರಿಷ್ಠ 100 ಜನ ರೈತರಿಗೆ ಒದಗಿಸಲು ಅವಕಾಶವಿರುತ್ತದೆ. ಆದರೆ ಆ ರೈತರು ಸಂಪೂರ್ಣ ಸಾವಯವತೆಗೆ ಪರಿವರ್ತಿತರಾಗಲು ಸಿದ್ಧರಿರಬೇಕು.
6. ಘಟಕವಾರು ನಿಗದಿಪಡಿಸಿರುವ ಅನುದಾನವನ್ನು ನಿಗದಿಪಡಿಸಿದ ಘಟಕದ ಅನುಷ್ಠಾನಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದುಹಾಗೂ ಅಂತರ ಘಟಕ ಬದಲಾವಣೆಗೆ ಅವಕಾಶವಿರುವುದಿಲ್ಲ.
7. ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಜಲಾನಯನ ಅಭಿವೃದ್ಧಿ ಇಲಾಖೆ, ರಾಜ್ಯ ಸರ್ಕಾರದ ಇತರೆ ಇಲಾಖೆ, ಕೇಂದ್ರ ಸರ್ಕಾರದ ಇಲಾಖೆಗಳು/ ಸಂಸ್ಥೆಗಳು, ರಾಜ್ಯದ ಎಲ್ಲಾ ಕೃಷಿ/ತೋಟಗಾರಿಕೆ ವಿಶ್ವವಿದ್ಯಾನಿಲಯ, ಇವರ ಇತ್ತೀಚಿನ ಅಥವಾ ಚಾಲ್ತಿಯಲ್ಲಿರುವ ದರ ಕರಾರು ಒಪ್ಪಂದದನ್ವಯ ವಿವಿಧ ಸಾವಯವ ಪರಿಕರಗಳ ಖರೀದಿಗೆ ಕ್ರಮ ಕೈಗೊಳ್ಳುವುದು.
8. ಆಯ್ದ ಗುಚ್ಛಗಳ ಕ್ರಿಯಾ ಯೋಜನೆ ಸಿದ್ಧಪಡಿಸುವಾಗ ಪ್ರತಿ ಫಲಾನುಭವಿಗೆ ಅನುಬಂಧದ ಕ್ರಮಸಂಖ್ಯೆ 1, 2 ಮತ್ತು 3 ಅನ್ನು ಕಡ್ಡಾಯವಾಗಿ ಒಳಪಡಿಸಿ ಕ್ರಮಸಂಖ್ಯೆ 6, 7 ಮತ್ತು 9 ರಲ್ಲಿನ ಯಾವುದಾದರೂ ಒಂದು ಘಟಕವನ್ನು ಆ ವರ್ಷದಲ್ಲಿ ಅನುದಾನ ಲಭ್ಯತೆಯ ಮೇಲೆ ಒದಗಿಸಲು ಪರಿಗಣಿಸುವುದು.
9. ಸಾಮೂಹಿಕ ಘಟಕಗಳಡಿ ಜಿಲ್ಲಾಮಟ್ಟದಲ್ಲಿ ಮಾರುಕಟ್ಟೆ ಆಧಾರಿತ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ/ತಾಲ್ಲೂಕು ಮಟ್ಟದ Startups ಗಳಿಗೆ ಒತ್ತು ನೀಡುವುದು.

## ಅನುಬಂಧ-3a: ಆಯ್ಕೆಯಾಗುವ ರೈತರಿಗೆ ವಿತರಿಸಬಹುದಾದ ಸಾವಯವ ಕೃಷಿ ಪೂರಕ ಪರಿಕರ/ಘಟಕ ಅನುಷ್ಠಾನ ಮಾರ್ಗಸೂಚಿ:

### ಅ) ವೈಯಕ್ತಿಕ ಚಟುವಟಿಕೆಗಳು:

**ಸಾವಯವ ಸಂಪನ್ಮೂಲ ಉತ್ಪಾದನೆ, ಜೀವ ವೈವಿದ್ಯತೆ ಮತ್ತು ಬೆಳೆ ವೈವಿದ್ಯತೆ**

1) **ಹಸಿರೆಲೆ ಗೊಬ್ಬರ ಬೀಜ ಹಾಗೂ ದ್ವಿದಳ ಧಾನ್ಯ ಬೀಜ ವಿತರಣೆ:** ಹಸಿರೆಲೆ ಗೊಬ್ಬರ ಬೆಳೆಗಳು, ದ್ವಿದಳ ಧಾನ್ಯ ಬೆಳೆಗಳನ್ನು ಮಣ್ಣಿನಲ್ಲಿ ಸೇರಿಸುವುದರಿಂದ ಸಸ್ಯ ಪೋಷಕಾಂಶಗಳನ್ನು ಒದಗಿಸುವುದರ ಜೊತೆಗೆ ಮಣ್ಣಿಗೆ ಸಾವಯವ ವಸ್ತುವನ್ನು ಸೇರಿಸುವುದರ ಮೂಲಕ ಮಣ್ಣಿನ ರಚನೆ, ನೀರು ಹಿಡಿದಿಟ್ಟುಕೊಳ್ಳುವ ಸಾಮಥ್ಯ ಹಾಗೂ ಜೈವಿಕ ಕ್ರಿಯೆಗಳನ್ನು ಸುಧಾರಿಸುವಲ್ಲಿ ಬಹಳ ಸಹಕಾರಿಯಾಗುತ್ತದೆ ಹಾಗೂ ಮಣ್ಣಿನಲ್ಲಿ ಸಾವಯವ ಇಂಗಾಲದ ಪ್ರಮಾಣವು ಹೆಚ್ಚಾಗಲು ಸಹಕಾರಿಯಾಗುತ್ತದೆ. ಹಸಿರೆಲೆ ಗೊಬ್ಬರದ ಬೀಜಗಳಾದ ಸೆಣಬು, ಡಯಂಚ ಮತ್ತು ದ್ವಿದಳ ಧಾನ್ಯ ಬೀಜಗಳಾದ ಆಲಸಂದೆ, ವೆಲ್ವೆಟ್ ಬೀನ್ಸ್ ಮತ್ತು ಹುರುಳಿ ಮುತಾಂದವುಗಳನ್ನು ಬಳಸಲು ಈ ಬೆಳೆಗಳ ಬೀಜಗಳನ್ನು ಪ್ರತಿ ಎಕರೆಗೆ ರೂ.1,500/-ರ ಗರಿಷ್ಠ ಸಹಾಯಧನದಲ್ಲಿ ಪ್ರತಿ ರೈತರಿಗೆ ಗರಿಷ್ಠ ಒಂದು ಎಕರೆ ಪ್ರದೇಶಕ್ಕೆ ಸಹಾಯಧನ ನೀಡಲು ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ.

2) **ದೇಶೀಯ ಬೀಜ ಮತ್ತು ಸಸಿಗಳ ವಿತರಣೆ, ತೋಟಗಾರಿಕೆ ಬೆಳೆಗಳ ಸಸಿಗಳು/ ತರಕಾರಿ ಬೀಜಗಳ ವಿತರಣೆ:** ನಾಟಿ ತಳಿ ಬೀಜಗಳ ಸಂರಕ್ಷಣೆ ಮತ್ತು ಉತ್ತೇಜನಕ್ಕಾಗಿ, ನಾಟಿ ಬೀಜಗಳು/ಸಸಿಗಳನ್ನು ಸಂಗ್ರಹಿಸಿ ರೈತರಿಗೆ ಒದಗಿಸುವುದು. ಹಾಗೆಯೇ ತೋಟಗಾರಿಕಾ ಬೆಳೆಗಳ ಸಸಿಗಳು ಮತ್ತು ತರಕಾರಿ ಬೀಜಗಳನ್ನು ರೈತರಿಗೆ ನೀಡುವುದು. ಒಂದು ಎಕರೆ ಪ್ರದೇಶಕ್ಕೆ ಗರಿಷ್ಟ ರೂ.1000/- ರಂತೆ ಪ್ರತಿ ಫಲಾನುಭವಿಗೆ ಗರಿಷ್ಠ 2 ಏಕರೆ ಪ್ರದೇಶಕ್ಕೆ ಸಹಾಯಧನ ಒದಗಿಸಲು ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ.

3) **ಸಾವಯವ ಗೊಬ್ಬರಗಳು** - ಸಾವಯವ ಗೊಬ್ಬರಗಳು, ಸಾಂದ್ರೀಕೃತ ಗೊಬ್ಬರಗಳು, ಜೈವಿಕ ಗೊಬ್ಬರಗಳು, ಎಣ್ಣೆ ಹಿಂಡಿಗಳು ಮತ್ತು ಸಾವಯವ ಕೃಷಿ ಪದ್ಧತಿಯಲ್ಲಿ ಬಳಸಲು ಅನುಮತಿ ನೀಡಿರುವ ಇತರೆ ಸಾವಯವ ಗೊಬ್ಬರ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ.

- ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಜಲಾನಯನ ಅಭಿವೃದ್ಧಿ ಇಲಾಖೆ, ಪಶು ಸಂಗೋಪನಾ ಇಲಾಖೆ, ರಾಜ್ಯ ಸರ್ಕಾರದ ಇತರೆ ಇಲಾಖೆ, ಕೇಂದ್ರ ಸರ್ಕಾರದ ಇಲಾಖೆಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು/ಧಾರವಾಡ/ರಾಯಚೂರು ಇವರ ಇತ್ತೀಚಿನ ಅಥವಾ ಚಾಲ್ತಿಯಲ್ಲಿರುವ ದರ ಕರಾರು ಒಪ್ಪಂದದನ್ವಯ ವಿವಿಧ ಸಾವಯವ ಪರಿಕರಗಳ ಖರೀದಿಗೆ ಕ್ರಮ ಕೈಗೊಳ್ಳುವುದು.
- ಪ್ರತಿ ಎಕರೆಗೆ ಗರಿಷ್ಠ ರೂ. 4300/- ರಂತೆ ಪ್ರತಿ ರೈತರ ಫಲಾನುಭಗಳಿಗೆ ಸಾವಯವ ಗೊಬ್ಬರ, ಜೈವಿಕ ಗೊಬ್ಬರ (ದ್ರವರೂಪ) ಸಹಾಯಧನ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

4). **ಜೈವಿಕ ಪೀಡೆನಾಶಕಗಳು:** ಜೈವಿಕ ಪೀಡೆ ನಾಶಕಗಳು, ಪರಭಕ್ಷಕ/ ಪರಾವಲಂಬಿ ಜೀವಿಗಳು /ಸಸ್ಯ ಆಧಾರಿತ ಕೀಟ ನಾಶಕಗಳು ಇತ್ಯಾದಿ. ಜೈವಿಕ ಪೀಡೆ ನಾಶಕಗಳು, ಪರಭಕ್ಷಕ/ ಪರಾವಲಂಬಿ ಜೀವಿಗಳು, ಸಸ್ಯ ಆಧಾರಿತ ಕೀಟ ನಾಶಕಗಳು ಸಾವಯವ ಕೃಷಿ

ಪದ್ಧತಿಯಲ್ಲಿ ಬಳಸಲು ಅನುಮತಿ ನೀಡಿರುವ ಇತರೆ ಸಾವಯವ ಗೊಬ್ಬರ ಮತ್ತು ಜೈವಿಕ ಪೀಡೆನಾಶಕಗಳ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ.

- ಪ್ರತಿ ಎಕರೆಗೆ ಗರಿಷ್ಟ ರೂ. 850/- ರಂತೆ ಪ್ರತಿ ರೈತರ ಫಲಾನುಭಗಳಿಗೆ ಗರಿಷ್ಟ 1 ಎಕರೆ ಪ್ರದೇಶಕ್ಕೆ ಸಹಾಯಧನ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

5). **ದ್ರವರೂಪದ ಸಾವಯವ ಗೊಬ್ಬರ/ಪಂಚಗವ್ಯ/ ಜೀವಾಮೃತ ತಯಾರಿಕೆಗೆ ಸಿಮೆಂಟ್ ತೊಟ್ಟಿ (ಒಟ್ಟು ನಿಗದಿತ ಮೊತ್ತ ರೂ.5000/-):** ಸಣ್ಣ ರೈತರುಗಳು ಕಡಿಮೆ ಪ್ರಮಾಣದಲ್ಲಿ ದ್ರವರೂಪದ ಸಾವಯವ ಗೊಬ್ಬರ/ಪಂಚಗವ್ಯ/ಜೀವಾಮೃತ/ಸಸ್ಯ ಜನ್ಯ ಕೀಟನಾಶಕ ಇತ್ಯಾದಿಗಳ ತಯಾರಿಕೆಗೆ 400 ಲೀ. ಸಾಮರ್ಥ್ಯವುಳ್ಳ ಸಿಮೆಂಟ್ ತೊಟ್ಟಿ ಒದಗಿಸಲು ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ವೃತ್ತಾಕಾರದ ಕಾಂಕ್ರಿಟ್ ರಿಂಗ್ಸ್, ಅಥವಾ ಇಟ್ಟಿಗೆ, ಸಿಮೆಂಟ್ ಅಥವಾ ಕಲ್ಲುಗಳನ್ನು ಬಳಸಿ ಸಿಮೆಂಟ್ ತೊಟ್ಟಿ ನಿರ್ಮಿಸಿಕೊಳ್ಳಬಹುದಾಗಿದೆ. ನೀರು ಸುಲಭದಲ್ಲಿ ಲಭ್ಯವಾಗುವ ಸ್ಥಳಗಳಲ್ಲಿ ಸಿಮೆಂಟ್ ತೊಟ್ಟಿ ನಿರ್ಮಿಸಿಕೊಳ್ಳುವುದು.

6). **ಬಯೋಡೈಜೆಸ್ಟರ್ ಘಟಕ ಸ್ಥಾಪನೆ:** ಕೃಷಿ ತ್ಯಾಜ್ಯ, ಸಗಣಿ, ಗಂಜಲ ಮತ್ತು ನೀರು - ಇವುಗಳನ್ನು ಒಂದು ತೊಟ್ಟಿಯಲ್ಲಿ ಹಾಕಿ, ಕೊಳೆಸಿ, ಅದರಿಂದ ಬರುವ ದ್ರವರೂಪದ ವಸ್ತುವು ರಸಗೊಬ್ಬರಗಳ ಬದಲಿಗೆ ಉತ್ತಮ ಗುಣಮಟ್ಟದ ಸಾವಯವ ಗೊಬ್ಬರವಾಗಿ ಬಳಸಬಹುದಾಗಿದೆ. ಈ ದ್ರವರೂಪದ ಗೊಬ್ಬರವನ್ನು ಮಣ್ಣಿನ ಸಾವಯವ ಹೊದಿಕೆ ಮೇಲೆ ಸಿಂಪರಣೆ ಮಾಡಿದಲ್ಲಿ, ಮಣ್ಣಿನ ಫಲವತ್ತತೆ ಸುಧಾರಿಸುವುದರ ಜೊತೆಗೆ ಮಣ್ಣಿನ ರಚನೆಯನ್ನು ಸುಧಾರಿಸುವುದು, ನೀರು ಹಿಡಿದಿಡುವ ಸಾಮರ್ಥ್ಯವನ್ನು ವೃದ್ಧಿಸುವುದು ಹಾಗೂ ಕೀಟ ಮತ್ತು ರೋಗಗಳನ್ನು ತಡೆಗಟ್ಟುವ ಸಾಮರ್ಥ್ಯ ವೃದ್ಧಿಯಾಗುತ್ತದೆ. ಬಯೋಡೈಜಿಸ್ಟರ್ ಘಟಕ ನಿರ್ಮಿಸಲು ಇಚ್ಛಿಸುವ ಆಯ್ದ ಫಲಾನುಭವಿಗಳು ಈಗಾಗಲೇ ನೆಲಹಾಸು ಮತ್ತು ಗಂಜಲ ಸಂಗ್ರಹಣ ತೊಟ್ಟಿಯನ್ನು ನಿರ್ಮಿಸಿಕೊಂಡಿರಬೇಕು. ಕಡ್ಡಾಯವಾಗಿ ನಿರ್ಮಿಸಿಕೊಂಡಿರಬೇಕು. ಇಲ್ಲವಾದಲ್ಲಿ ಪ್ರಥಮದಲ್ಲಿ ನೆಲಹಾಸು ನಿರ್ಮಿಸಲು ಸಹಾಯಧನ ನೀಡಿ ಮುಂದಿನ ವರ್ಷದಲ್ಲಿ ಬಯೋಡೈಜಿಸ್ಟರ್ ನಿರ್ಮಾಣಕ್ಕೆ ಪರಿಗಣಿಸುವುದು.

**ಬಯೋಡೈಜೆಸ್ಟರ್ನಿಂದಾಗುವ ಪ್ರಯೋಜನಗಳು:-**

- ಬಯೋಡೈಜೆಸ್ಟರ್ ಶೇಖರಣೆಯನ್ನು ಪೋಷಕಾಂಶಗಳ ನಿರ್ವಹಣೆಗೆ ಹಾಗು ಸಸ್ಯ ಸಂರಕ್ಷಣೆಗಾಗಿ ಬಳಕೆ ಮಾಡಬಹುದು.
- ಉಪಯುಕ್ತವಾದ ಅಣುಜೀವಿಗಳಾದ ಅಝೋಸ್ಪೈರಿಲಂ ಮತ್ತು ರಂಜಕ ಕರಗಿಸುವ ಸೂಕ್ಷ್ಮಾಣು ಜೀವಿಗಳು ಈ ಶೇಖರಣೆಯಲ್ಲಿರುವುದರಿಂದ ಮಣ್ಣಿನ ಪಲವತ್ತತೆ ಸುಧಾರಿಸಲು ಸಹಾಯವಾಗುತ್ತದೆ.
- ಆಂಟಾಗೊನಿಷ್ಟಿಕ್ ಶಿಲೀಂದ್ರುವಾದ ಟ್ರೈಕೊಡರ್ಮ ಸಹ ಇದರಲ್ಲಿದೆ.
- ಬಯೋಡೈಜೆಸ್ಟರ್ ಶೇಖರಣೆಯು ಕೃಷಿ ತ್ಯಾಜ್ಯ, ಸಗಣಿ ಮತ್ತು ಗಂಜಲಗಳ ಮಿಶ್ರಣವಾದ್ದರಿಂದ ರೋಗ ಮತ್ತು ಕೀಟಗಳ ನಿಯಂತ್ರಣಕ್ಕೆ ಸಹಾಯಕವಾಗಿರುತ್ತದೆ.
- ಬಯೋಡೈಜೆಸ್ಟರ್ ಶೇಖರಣೆಯು ಮಣ್ಣಿನ ಆರೋಗ್ಯವನ್ನು ಸುಧಾರಿಸುತ್ತದೆ.

**6a). ಬಯೋಡೈಜೆಸ್ವರ್‌ಗಾಗಿ ವಿನ್ಯಾಸ ಮತ್ತು ತಗಲುವ ವೆಚ್ಚ:**

- ಬಯೋಡೈಜೆಸ್ವರ್ ತೊಟ್ಟಿಯ ಅಳತೆ: 10 ಅಡಿ ಉದ್ದ, 4 ಅಡಿ ಅಗಲ ಮತ್ತು 4 ಅಡಿ ಆಳ
- ಶೇಖರಣಾ ತೊಟ್ಟಿಯ ಅಳತೆ: 4 ಅಡಿ ಉದ್ದ, 4 ಅಡಿ ಅಗಲ ಮತ್ತು 4 ಅಡಿ ಆಳ

| ಕ್ರಸಂ | ವಿವರಗಳು | ಬೇಕಾಗುವ ಮೊತ್ತ (ರೂ.ಗಳಲ್ಲಿ) | ಶೇ.75ರ ಸಹಾಯಧನ | ಶೇ.90ರ ಸಹಾಯಧನ |
|---|---|---|---|---|
| 1 | ಸಿಮೆಂಟು, ಮರಳು, ಇಟ್ಟಿಗೆ /ಕಲ್ಲು /ಸಾಲಿಡ್ ಬ್ಲಾಕ್ ಇತ್ಯಾದಿಗಳಿಗೆ | 26000-00 | 27,375-00 | 32850-00 |
| 2 | ಕೂಲಿ ಖರ್ಚು | 10500-00 | | |
| | ಒಟ್ಟು ವೆಚ್ಚ | 36500-00 | | |

Cost of Construction Rs. 912.50/ cft

**6b). ಬಯೋಡೈಜೆಸ್ವರ್ ಗಾಗಿ ವಿನ್ಯಾಸ ಮತ್ತು ತಗಲುವ ವೆಚ್ಚ:**

- ಬಯೋಡೈಜೆಸ್ವರ್ ತೊಟ್ಟಿಯ ಅಳತೆ: 15 ಅಡಿ ಉದ್ದ, 4 ಅಡಿ ಅಗಲ ಮತ್ತು 4 ಅಡಿ ಆಳ
- ಶೇಖರಣಾ ತೊಟ್ಟಿಯ ಅಳತೆ: 5 ಅಡಿ ಉದ್ದ, 4 ಅಡಿ ಅಗಲ ಮತ್ತು 4 ಅಡಿ ಆಳ

| ಕ್ರಸಂ | ವಿವರಗಳು | ಬೇಕಾಗುವ ಮೊತ್ತ (ರೂ.ಗಳಲ್ಲಿ) | ಶೇ.75ರ ಸಹಾಯಧನ | ಶೇ.90ರ ಸಹಾಯಧನ |
|---|---|---|---|---|
| 1 | ಸಿಮೆಂಟು, ಮರಳು, ಇಟ್ಟಿಗೆ /ಕಲ್ಲು /ಸಾಲಿಡ್ ಬ್ಲಾಕ್ ಇತ್ಯಾದಿಗಳಿಗೆ | 40000-00 | 39000-00 | 46800-00 |
| 2 | ಕೂಲಿ ಖರ್ಚು | 12000-00 | | |
| | ಒಟ್ಟು ವೆಚ್ಚ | 52000-00 | | |

Cost of Construction Rs. 866.70/ cft

ಷರಾ: ಮೇಲಿನ ಅಳತೆಯ ಬಯೋಡೈಜೆಸ್ವರ್ ಗಳ ನಿರ್ಮಾಣಕ್ಕೆ ಸ್ಥಳಾವಕಾಶವಿಲ್ಲದಿದ್ದಲ್ಲಿ ಪ್ರತಿ ಘನ ಮೀಟರ್ ಗೆ ರೂ. 890/- ದರದಲ್ಲಿ ರೈತರು ನಿರ್ಮಿಸಿಕೊಳ್ಳಬಹುದಾಗಿರುತ್ತದೆ. ಇದರ ಬದಲಿಗೆ HDPE ನಿರ್ಮಿತ 1600/900/500ಲೀ ಸಾಮರ್ಥ್ಯದ ಸಂಚಾರಿ ಬಯೋಡೈಜೆಸ್ವರ್ ಗಳನ್ನು ಸಹ ನಿಗದಿತ ಸಹಾಯಧನದಲ್ಲಿ ಒದಗಿಸಬಹುದಾಗಿರುತ್ತದೆ.

ಈ ಹಿಂದೆ ಸರ್ಕಾರದ ಯೋಜನೆಗಳಡಿ ಈಗಾಗಲೇ ಬಯೋಡೈಜೆಸ್ವರ್ ಘಟಕಕ್ಕೆ ಸಹಾಯಧನ ಪಡೆದಿದ್ದಲ್ಲಿ ಅಂತಹವರು ಮತ್ತೇ ಅರ್ಹರಿರುವುದಿಲ್ಲ.

**7) ಎರಡು ಜಾನುವಾರುಗಳು ನಿಲ್ಲುವ ಜಾಗಕ್ಕೆ ನೆಲಹಾಸು** (10' x 12' ವಿಸ್ತೀರ್ಣ)

